ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

# ಕಲಾ ವಾರ್ತೆ

ಜನವರಿ-ಮಾರ್ಚ್ 2016, ಸಂಚಿಕೆ: 99

ಪ್ರಧಾನ ಸಂಪಾದಕರು
**ಡಾ. ಎಂ.ಎಸ್.ಮೂರ್ತಿ**

ಸಂಪಾದಕರು
**ರಾಜು ಮಳವಳ್ಳಿ**

ಪ್ರಕಟಣಾ ಸಮಿತಿ
**ಎಸ್.ಜಿ. ವಾಸುದೇವ್**
**ಕೆ.ವಿ. ಸುಬ್ರಹ್ಮಣ್ಯಂ**
**ಡಾ. ಪ್ರಮೀಳಾ ಲೋಚನ**
**ಸಿ. ಚಿಕ್ಕಣ್ಣ**
**ರಾಜು ಮಳವಳ್ಳಿ**

ಕನ್ನಡ ಭವನ, ಎರಡನೇ ಮಹಡಿ,
ಜೆ.ಸಿ. ರಸ್ತೆ, ಬೆಂಗಳೂರು-560002
ದೂರವಾಣಿ: 080-2248 0297
ಈ-ಮೇಲ್: kla.karnataka@gmail.com
www. lalitkalakarnataka.org
karnataka lalitha kala academy

**KALA VARTHE** - Quarterly News portal
Published by
H.V. Indramma, Registrar
Karnataka Lalitha Kala Academy
Kannada Bhavana, J.C. Road
Bengaluru - 560 002
Ph : 080 - 2248 0297
E-mail : kla.karnataka@gmail.com
www.lalitkalakarnataka.org

Editor :
Raju Malavalli
M: 9739977450

Page : 42 +4
Copies : 2000

Printed at
**Regal Print Service**
Bangalore
M: 99643516 55

## ಪರಿವಿಡಿ


- ಅಧ್ಯಕ್ಷರ ಮಾತು ... 3
- ಸಂಪಾದಕರ ನುಡಿ ... 5
- ಪ್ರಶಸ್ತಿ ಸಂಭ್ರಮ ... 7
- ಸಂಭ್ರಮದ ಹೊನಲು ... 14
- 'ಅಕಾಡೆಮಿ'ಯ ಮಾಧ್ಯಮ ಚಿತ್ರಗಳು ... 24
- ಕಲಾಪರಿಚಾರಿಕೆ ... 26
- ಸುವರ್ಣ ಸಾಧಕರು ... 36

## ಅಧ್ಯಕ್ಷರ ಮಾತು...



**ಕ**ಲಾವಾರ್ತೆಯ ನಾಲ್ಕನೇ ಸಂಚಿಕೆ ನಿಮ್ಮ ಕೈಯಲ್ಲಿದೆ. ಈ ವರ್ಷದ ಅನೇಕ ಪ್ರಗತಿಪರ ಯಶಸ್ವಿ ಕಾರ್ಯಕ್ರಮಗಳ ವಿವರಗಳು ಇಲ್ಲಿವೆ. ಮುಂದಿನ ಪ್ರಮುಖ ಕಾರ್ಯಯೋಜನೆಗಳಲ್ಲಿ 'ಕಲಾಸಂಕ್ರಾಂತಿ' ನವೆಂಬರ್‌ನಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಸುಮಾರು ನೂರು 'ಕಲಾಗ್ಯಾಲರಿ' ಮಳಿಗೆಗಳಲ್ಲಿ ನೂರಾರು ಕಲಾವಿದರ ಕೃತಿಗಳು ಸಾರ್ವಜನಿಕವಾಗಿ ತೆರೆದುಕೊಳ್ಳಲಿದೆ. ರಾಜ್ಯದ 70, ದೇಶದ 30 ಕಲಾವಿದರಿಗೆ ಈ ಕಲಾಸಂಕ್ರಾಂತಿ ಮಳಿಗೆಗಳ ಸೌಲಭ್ಯ ದೊರೆಯಲಿದೆ. ಇದಕ್ಕಾಗಿ ರಾಜ್ಯದ ಕಲಾವಿದರು ಸಕ್ರಿಯವಾಗಿ ಭಾಗವಹಿಸಬೇಕೆಂದು ಆಹಾನಿಸುತ್ತಿದ್ದೇನೆ. ಆಯ್ಕೆ ಸಮಿತಿಯ ಪ್ರಕ್ರಿಯೆ ಅಕಾಡೆಮಿ ಪ್ರಾರಂಭಿಸಿದೆ.

ಈ ಸಾಲಿನ 'ಗೌರವ ಫೆಲೋಶಿಪ್' ಇಬ್ಬರು ಹಿರಿಯ ಕಲಾವಿದರಾದ ಶ್ರೀ ಸಿ. ಚಂದ್ರಶೇಖರ್ ಮತ್ತು ಕೆ.ವಿ.ಸುಬ್ರಮಣ್ಯಂ ಅವರಿಗೆ ತಲಾ ಎರಡು ಲಕ್ಷ ರೂಪಾಯಿಗಳನ್ನು ನೀಡಲಾಗಿದೆ. ಹಾಗೇ 10 ಯುವ ಕಲಾವಿದರಿಗೆ ತಲಾ ಒಂದು ಲಕ್ಷ ರೂಪಾಯಿಗಳು 'ಕಲಾಸಂಶೋಧನೆ ಫೆಲೋಶಿಪ್' ನೀಡಲಾಗಿದೆ. ಆಗಸ್ಟ್ ತಿಂಗಳಲ್ಲಿ ಅಕಾಡೆಮಿಯ 'ವರ್ಣಗ್ಯಾಲರಿ'ಯಲ್ಲಿ ಇವರ ಕಲಾಕೃತಿಗಳ ಪ್ರದರ್ಶನದ ವ್ಯವಸ್ಥೆ ಮಾಡಲಾಗಿದೆ.

ಈಗಾಗಲೇ 'ಕಲಾಸಾಹಿತ್ಯ ಚಿಂತನೆ'ಯನ್ನು ಬೆಳೆಸಲು ಅನೇಕ ವಿಚಾರ ಸಂಕಿರಣಗಳನ್ನು ಯೋಜಿಸಲಾಗಿದೆ. ಮಡಿಕೇರಿಯಲ್ಲಿ ನಡೆದ 'ದೃಶ್ಯಕಲೆಯಲ್ಲಿ ರೇಖಾಚಿತ್ರಗಳ ಮಹತ್ವ' ವಿಚಾರಸಂಕಿರಣ ಯಶಸ್ವಿಯಾಗಿದೆ. ಈಗ ಅದರಂತೆ ಬೆಂಗಳೂರಿನಲ್ಲಿ ಮೇ ತಿಂಗಳಲ್ಲಿ 'ಕಲಾಚಿಂತನೆ' ಮತ್ತು ಜುಲೈ ತಿಂಗಳಲ್ಲಿ ಧಾರವಾಡದಲ್ಲಿ 'ದೃಶ್ಯಕಲಾ ಸಾಹಿತ್ಯ-ಸಂಶೋಧನೆ' ಮತ್ತು ಆಗಸ್ಟ್‌ನಲ್ಲಿ 'ದೃಶ್ಯಕಲಾ ಸಾಹಿತ್ಯ ವಿಮರ್ಶೆ' ಕುರಿತಂತೆ ವಿಚಾರಸಂಕಿರಣಗಳನ್ನು ಆಯೋಜಿಸಲಾಗಿದೆ. ಎಲ್ಲಾ ಕಲಾಸ್ತಕರಿಗೆ, ಕಲಾವಿದರಿಗೆ, ಸಂಶೋಧಕರಿಗೆ ಈ ಎಲ್ಲಾ ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಾ ಕಲಾವಿದರೆಲ್ಲರಿಗೂ ಶುಭಕೋರುತ್ತೇನೆ.

**ಡಾ. ಎಂ.ಎಸ್.ಮೂರ್ತಿ**
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

# ಪರಂಪರೆಯ ನಡೆ

**ಕ**ಲೆ ದೈವದತ್ತ, ಪ್ರತಿಭೆ ಅಂತರ್ಗತ. ಅವಕಾಶಗಳು ದೊರೆತಾಗ ಮಾತ್ರವೇ ಪ್ರತಿಭಾ ಪ್ರದರ್ಶನ. ಅವಕಾಶಗಳಿಗೆ ಕಾಯುವುದಕ್ಕಿಂತಲೂ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವುದು ಸಾಧಕರ ಲಕ್ಷಣ. ಪ್ರತಿಕೂಲ ವಾತಾವರಣದ ನಡುವೆಯೂ ಅರಳಿ ನಿಲ್ಲುವುದೇ ನೈಜಪ್ರತಿಭೆ. ಅಂತಹ ಪ್ರತಿಭೆಗಳನ್ನು ಬೆನ್ನುತಟ್ಟಿ ಪ್ರೋತ್ಸಾಹಿಸುವುದು, ಸನ್ಮಾನಿಸಿ ಹುರಿದುಂಬಿಸುವುದು ಸಮಾಜದ ಆದ್ಯ ಕರ್ತವ್ಯ.

ಅಂತಹ ಕರ್ತವ್ಯ ನಿಭಾವಣೆಯಲ್ಲಿ ಕನ್ನಡ ನಾಡಿನದ್ದು ಅನುಕರಣೀಯ ಪರಂಪರೆ. ಈ ಪಾರಂಪರಿಕ ನಡೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯೂ ಹೊರತಲ್ಲ. ಅಕಾಡೆಮಿ ಪ್ರತಿವರ್ಷ ನಾಡಿನ ಮೂವರು ಶ್ರೇಷ್ಠ ಕಲಾವಿದರಿಗೆ ಜೀವಮಾನದ ಸಾಧನೆಗಾಗಿ 'ವಾರ್ಷಿಕ ಗೌರವ ಪ್ರಶಸ್ತಿ' ಹಾಗೂ ಕಲಾ ಪ್ರದರ್ಶನದಲ್ಲಿ ಅತ್ಯುತ್ತಮವೆನಿಸಿದ ಕಲಾಕೃತಿಗಳನ್ನು ರಚಿಸಿದ ಹತ್ತು ಮಂದಿ ಯುವ ಕಲಾವಿದರಿಗೆ 'ವಾರ್ಷಿಕ ಕಲಾ ಬಹುಮಾನ' ನೀಡುವುದು ವಾಡಿಕೆ. ಪ್ರತಿ ವರ್ಷದಂತೆ 2015ನೇ ಸಾಲಿನಲ್ಲೂ ಈ ಸತ್ಸಂಪ್ರದಾಯದ ಪಾಲನೆಯಾಗಿದೆ.

ಸಾಧಕರನ್ನು ಸನ್ಮಾನಿಸುವ ಕ್ಷಣ ಸಾಧಕರಿಗೆ, ಆಯೋಜಕರಿಗೆ ಮಾತ್ರವಲ್ಲ ಪ್ರತಿ ಕಲಾವಿದರಿಗೂ ಅವಿಸ್ಮರಣೀಯ. ದಶಕಗಳ ಕಲಾಭಿವ್ಯಕ್ತಿ, ಸಾಧನೆ ಮತ್ತು ತಪಸ್ಸು ಸಾರ್ಥಕತೆ ಪಡೆದುಕೊಳ್ಳುವ ಆ ಗಳಿಗೆಯನ್ನು ಸವಿಸ್ತಾರವಾಗಿ ಕಲಾಸಮೂಹದ ಮುಂದೆ ತೆರೆದಿಡುವ ಅಕಾಡೆಮಿಯ ಪ್ರಯತ್ನದ ಪ್ರತಿರೂಪವೇ ಈ ಬಾರಿಯ 'ಕಲಾವಾರ್ತೆ' ಸಂಚಿಕೆ.

ಬಾಗಲಕೋಟೆಯಲ್ಲಿ ನಡೆದ 44ನೇ ವಾರ್ಷಿಕ ಗೌರವ ಪ್ರಶಸ್ತಿ ಮತ್ತು ಬಹುಮಾನ ಪ್ರಧಾನ ಸಮಾರಂಭದ ವಿಸ್ತೃತ ವರದಿ, ಅಕಾಡೆಮಿ ಹೊಸ ಸಂವತ್ಸರದ ಮೊದಲ ಮೂರು ತಿಂಗಳು ನಡೆದ ಕಾರ್ಯಕ್ರಮಗಳ ವಿವರಗಳು ಇಲ್ಲುಂಟು. ಕೇಂದ್ರ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿ ಪುರಸ್ಕೃತ ರಾದವರ ಪಟ್ಟಿಯನ್ನು ವಿಶೇಷವಾಗಿ ಕಲಾಸಕ್ತರು ಮತ್ತು ಕಲಾವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಕಟಿಸಲಾಗಿದೆ. ಕಲಾವಾರ್ತೆ ಕೇವಲ ಸುದ್ದಿಗೆ ಸೀಮಿತವಾಗದೆ ಮಾಹಿತಿಯ ಕಣಜವಾಗಬೇಕು, ಕಲಾವಿದ್ಯಾರ್ಥಿಗಳು ಅನುಕೂಲವಾಗುವ ರೀತಿಯಲ್ಲಿ ಸಂಚಿಕೆ ರೂಪಿಸಬೇಕೆಂಬ ಒಳತುಡಿತದ ಅನಾವರಣವಾಗಿ ಮೂಡಿಬಂದಿರುವ ಈ 'ಸಂಚಿಕೆ' ಎಲ್ಲರಿಗೂ ಇಷ್ಟವಾದರೆ, ಒಪ್ಪವೆನಿಸಿದರಲ್ಲಿಯೇ ಅಕಾಡೆಮಿ ಮತ್ತು ನಮ್ಮೆಲ್ಲರ ಧನ್ಯತೆ.

**ರಾಜು ಮಳವಳ್ಳಿ**
ಸಂಪಾದಕರು



## ವಾರ್ಷಿಕ ಪ್ರಶಸ್ತಿ ಸಡಗರ

**ಕ**ರ್ನಾಟಕ ಸಾಧಕರ ಕರ್ಮಭೂಮಿ, ಪುಣ್ಯ ಪುರುಷರ ಜನ್ಮಭೂಮಿ. ಈ ನೆಲ ಮಹಾಪ್ರತಿಭೆಗಳ ತವರು. ಕ್ಷೇತ್ರ ಯಾವುದೇ ಇರಲಿ ಸಾಧಕರಿಗೇನೂ ಕೊರತೆಯಿಲ್ಲ. ಅವಕಾಶಗಳು ಸಿಕ್ಕಿ ಹೊಳಪು ಪಡೆಯುವ ಪ್ರತಿಭೆಗಳು ಒಂದೆಡೆಯಾದರೆ, ಅವಕಾಶಗಳನ್ನು ಸೃಷ್ಟಿಸಿಕೊಂಡು ಕಲಾವಂತಿಕೆಯನ್ನು ಮೆರೆದವರು ಅನೇಕ. ಅಂತಹ ಪ್ರತಿಭೆಗಳನ್ನು ಗೌರವಿಸುವುದು ಈ ನಾಡಿನ ಭವ್ಯಸಂಸ್ಕೃತಿಗಳಲ್ಲಿ ಒಂದು. ಆ ಸಾಂಸ್ಕೃತಿಕ ಪರಂಪರೆ ಅಂದಿನಿಂದ ಇಂದಿನವರೆಗೂ ಅನೂಚಾನವಾಗಿ ಮುಂದುವರೆದುಕೊಂಡು ಬಂದಿದೆ.



ಬಾಗಲಕೋಟೆಯಲ್ಲಿ ನಡೆದ ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸಚಿವರಾದ ಎಸ್.ಆರ್.ಪಾಟೀಲ್ ಮತ್ತು ಎಚ್.ವೈ.ಮೇಟಿ ಅವರೊಂದಿಗೆ ಅಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ.

ಕರ್ನಾಟಕ ಲಲಿತಕಲಾ ಅಕಾಡೆಮಿಯೂ ಸಹ ಅಂತಹದೊಂದು ಪರಂಪರೆಯನ್ನು ದಶಕಗಳಿಂದ ನಿರಂತರವಾಗಿ ಪಾಲಿಸಿಕೊಂಡು ಬಂದಿದೆ. ಪ್ರತಿ ವರ್ಷ ಲಲಿತಕಲೆಗಳ ಕ್ಷೇತ್ರದಲ್ಲಿ ಸ್ಮರಣೀಯ ಸಾಧನೆಗೈದು ಹೆಜ್ಜೆಗುರುತು ಮೂಡಿಸಿದ ಮೂವರು ಸಾಧಕರಿಗೆ ವಾರ್ಷಿಕ ಗೌರವ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಪ್ರತಿಭೆ, ಸೇವೆ ಮತ್ತು ಕಲಾ ನಿಷ್ಠೆಯೇ ಈ ಪ್ರಶಸ್ತಿ ಆಯ್ಕೆಗೆ ಮಾನದಂಡವಾಗಿದೆ. ಪ್ರತಿ ವರ್ಷದಂತೆ 2015-16ನೇ ಸಾಲಿನ ಗೌರವ ಪ್ರಶಸ್ತಿ ಮತ್ತು ವಾರ್ಷಿಕ ಬಹುಮಾನಗಳಿಗೆ ಆಯ್ಕೆಯಾದ ಅರ್ಹ ಪ್ರತಿಭಾವಂತರಿಗೆ



**ಬಾಗಲಕೋಟೆಯ ನವನಗರದ ಕಲಾಭವನದಲ್ಲಿ ಏರ್ಪಡಿಸಿದ್ದ 44ನೇ ವಾರ್ಷಿಕ ಕಲಾ ಪ್ರದರ್ಶನವನ್ನು ಹಿರಿಯ ಕಲಾವಿದರಾದ ವಿಜಯ ಸಿಂಧೂರ ಅವರು ಉದ್ಘಾಟಿಸಿದ ಸಂದರ್ಭಕ್ಕೆ ಅಕಾಡೆಮಿ ಬಳಗದ ಸಾಕ್ಷಿ**

ಬಾಗಲಕೋಟೆಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

## ಕಲಾಪ್ರದರ್ಶನ

ಮಾರ್ಚ್ 11ರಂದು ಬಾಗಲಕೋಟೆಯ ನವನಗರದ ಕಲಾಭವನದಲ್ಲಿ ಅದ್ದೂರಿಯಾಗಿ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು. ಅಂದು ಶುಕ್ರವಾರ ಬೆಳಗ್ಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ 44ನೇ ವಾರ್ಷಿಕ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಮೂರು ದಿನಗಳ ಕಾಲ ಕಲಾರಸಿಕರ ಕಣ್ಮನ ಸೆಳೆದ ಚಿತ್ರಕಲಾ ಪ್ರದರ್ಶನದಲ್ಲಿ 44ನೇ ವಾರ್ಷಿಕ ಕಲಾ ಬಹುಮಾನಕ್ಕೆ ಪಾತ್ರರಾದ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು.

ಜಮಖಂಡಿಯ ಹಿರಿಯ ಕಲಾವಿದರಾದ ಶ್ರೀ ವಿಜಯ ಸಿಂಧೂರ ಅವರು ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ ಕಲಾಕೃತಿಗಳ ಅನಾವರಣಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಶೈಲ ಕರಿಶಂಕರಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಜಯ ಸಿಂಧೂರ ಅವರು, ಲಲಿತ ಕಲೆಗೆ ಅದ್ಭುತ ಇತಿಹಾಸ ಇದ್ದು ಭಾರತೀಯ ಕಲಾ ಸಂಸ್ಕೃತಿಯಲ್ಲಿ ಲಲಿತಕಲೆಗೆ ತನ್ನದೇ ಆದ ಮಹತ್ವ ಇರುವುದರಿಂದ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ ಎಂದರು.

ಚಿತ್ರಕಲೆ ಮತ್ತು ದೃಶ್ಯ ಕಲೆಗಳನ್ನೊಳಗೊಂಡ ಲಲಿತಕಲೆಯನ್ನು ಎಲ್ಲರೂ ಪ್ರೋತ್ಸಾಹಿಸಿ ಅದನ್ನು ಪ್ರಾಮಾಣಿಕವಾಗಿ ಬೆಳೆಸುವ ಕಾರ್ಯವಾಗಬೇಕೆಂದು ಕರೆ ನೀಡಿದ ಸಿಂಧೂರ ಅವರು, ಲಲಿತಕಲಾ ವೃತ್ತಿಗರಿಗೆ ಹೆಚ್ಚೆಚ್ಚು ವೇದಿಕೆಗಳನ್ನು ರೂಪಿಸಿ ಉತ್ತೇಜಿಸಬೇಕೆಂದರು.

ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಮಾತನಾಡಿ, ಸಮಾಜವನ್ನು ಸರಿದಾರಿಗೆ ತರುವ ಅದಮ್ಯ ಶಕ್ತಿ ಲಲಿತಕಲೆಗೆ ಇದ್ದು ಜೀವನ ಕಲಿಕೆಗೆ ಇದೊಂದು ಅದ್ಭುತ ಮಾಧ್ಯಮವಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಲಲಿತಕಲಾ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಆದಷ್ಟು ಬೇಗ ಈಡೇರಿಸಬೇಕು ಎಂದು ಒತ್ತಾಯಿಸಿದರು.



ಕಲಾಪ್ರದರ್ಶನದಲ್ಲಿ ಯುವಕಲಾವಿದರ ಕೈಚಳಕವನ್ನು ತದೇಕ ಚಿತ್ತದಿಂದ ವೀಕ್ಷಿಸುತ್ತಿರುವ ಹಿರಿಯ ಕಲಾವಿದರಾದ ವಿಜಯ ಸಿಂಧೂರ ಮತ್ತು ಅಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ ಮತ್ತಿತರರು.

ಕಾರ್ಯಕ್ರಮದಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ವಿ. ಇಂದ್ರಮ್ಮ, ಸದಸ್ಯರಾದ ಖಾಸಿಂಕನಸಾವಿ, ಕಲಾವಿದರು, ಸಾಹಿತಿಗಳು ಮತ್ತು ಕಲಾಪ್ರೇಮಿಗಳು ಉಪಸ್ಥಿತರಿದ್ದರು.

# 2015–16ನೇ ಸಾಲಿನ ಗೌರವ ಪ್ರಶಸ್ತಿ ಸಮರ್ಪಣೆ

**ಮಾ**ರ್ಚ್ 11ರಂದು ಸಂಜೆ ಕಲಾಭವನದಲ್ಲಿ ಕಲಾಸಮುದಾಯದ ಸಮ್ಮುಖದಲ್ಲಿ ನಡೆದ ಸಮಾರಂಭದಲ್ಲಿ ವಾರ್ಷಿಕ ಗೌರವ ಪ್ರಶಸ್ತಿ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.

2015–16ನೇ ಸಾಲಿನ ಗೌರವ ಪ್ರಶಸ್ತಿಗೆ ಪಾತ್ರರಾದ ಮೂವರ ಪೈಕಿ ಹಿರಿಯರಾದ ಉಡುಪಿಯ ಶ್ರೀ ವಿಜಯನಾಥ ಶಣೈ ಅವರು ಅನಾರೋಗ್ಯದ ನಿಮಿತ್ತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರಲಿಲ್ಲ. ಇನ್ನುಳಿದಂತೆ ಗದಗ ಜಿಲ್ಲೆಯ ಬೆಣಗೇರಿಯ ಶ್ರೀ ಕಾಶಪ್ಪ ವೀರಪ್ಪ ಕುಂದಗೋಳ ಮತ್ತು ಮೈಸೂರಿನ ಶ್ರೀ ಎಲ್.ಎಸ್.ಎನ್.ಆಚಾರ್ ಅವರಿಗೆ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಐಟಿಬಿಟಿ ಸಚಿವ ಶ್ರೀ ಎಸ್.ಆರ್.ಪಾಟೀಲ್ ಅವರು ಗೌರವ ಪ್ರಶಸ್ತಿಯನ್ನು ಪ್ರದಾನ ಮಾಡಿದರು.




ಹಿರಿಯ ಕಲಾವಿದರಾದ ಶ್ರೀ ಕಾಶಪ್ಪ ವೀರಪ್ಪ ಕುಂದಗೋಳ ಮತ್ತು ಶ್ರೀ ಎಲ್.ಎಸ್.ಎಸ್. ಆಚಾರ್ ಅವರಿಗೆ 2015ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ಪ್ರಧಾನ ಮಾಡಿದ ಸಡಗರದ ಕ್ಷಣ.




**2015–16ನೇ ಸಾಲಿನ ವಾರ್ಷಿಕ ಬಹುಮಾನ ಪುರಸ್ಕೃತ ಪ್ರತಿಭೆಗಳೊಂದಿಗೆ ಗೌರವ ಪ್ರಶಸ್ತಿ ಪುರಸ್ಕೃತರು, ಸಚಿವದ್ವಯರು ಮತ್ತು ಅಕಾಡೆಮಿ ಬಳಗ.**

ಇದೇ ವೇಳೆ 44ನೇ ವಾರ್ಷಿಕ ಬಹುಮಾನ ವಿಜೇತರಾದ 1. ಶ್ರೀ ಮುನಿಕೃಷ್ಣ ಆರ್ (ಮಾಲೂರು) ಪೇಯಿನ್–ಲಾಕ್ ಮಿಶ್ರ ಮಾಧ್ಯಮ, 2. ಶ್ರೀಮತಿ ವಿಜಯಾ ಗೋಪಿನಾಥ್ (ಬೆಂಗಳೂರು) ಚಾಮುಂಡೇಶ್ವರಿ (ಸಾಂಪ್ರದಾಯಿಕ ಶೈಲಿ) ಜಲವರ್ಣ, 3. ಶ್ರೀ ಸಂಗಮ್ ವಿ. ದೊಡ್ಡಮನಿ (ಬೆಳಗಾವಿ) ಅನ್‌ಟೈಟಲ್ ಗ್ರಾಫಿಕ್, 4. ಶ್ರೀ ಐಶ್ವರ್ಯನ್ ಕೆ. (ಬೆಂಗಳೂರು) ಲಾಸ್ ಆಫ್ ಅಟ್ರಾಕ್ಷನ್ ಮಿಶ್ರಮಾಧ್ಯಮ, 5. ಶ್ರೀ ಕೆ.ಎಸ್. ಶ್ರೀನಿವಾಸ (ಬೆಂಗಳೂರು) ಕೋಬಾಲ್ಟ್ ಬ್ಲೂ ಛಾಯಚಿತ್ರ, 6. ಶ್ರೀ ಸುನೀಲ್ ಲೋಹಾರ್ (ಕಲಬುರ್ಗಿ) ವಾಹಕ ಜಲವರ್ಣ, 7. ಶ್ರೀ ವಸಂತ (ಬಂಟ್ವಾಳ ತಾಲ್ಲೂಕು) ಪ್ರೆಸೆನ್ಸ್ ಇನ್ ದಿ ಡಾರ್ಕ್ ಅಕ್ರಲಿಕ್, 8. ಶ್ರೀ ಮಹೇಶ್ ಪಿ. ಹೊನುಲೆ (ಬೆಳಗಾವಿ) ಭವಾನಿ ಮಂಟಪ (ಪ್ರಕೃತಿ ಚಿತ್ರ) ಜಲವರ್ಣ, 9. ಶ್ರೀ ವಿಶ್ವಕರ್ಮ ಆಚಾರ್ಯ (ಚಿಕ್ಕಮಗಳೂರು) ಭಾವಚಿತ್ರ ಪೆನ್ಸಿಲ್ ಮತ್ತು ಪೇಪರ್ ಮತ್ತು 10. ಶ್ರೀ ಲಿಂಗರಾಜು ಕಾಚಾಪುರ (ಬಿಜಾಪುರ) ಟಾಕ್ಸಿ ಎಚ್ಚಿಂಗ್ ಅವರಿಗೆ ಸಚಿವರು ಬಹುಮಾನ ವಿತರಿಸಿ ಸನ್ಮಾನಿಸಿದರು.

ಈ ಅಪರೂದ ಕ್ಷಣಕ್ಕೆ ಬಾಗಲಕೋಟೆಯ ಶಾಸಕರಾದ ಶ್ರೀ ಎಚ್.ವೈ. ಮೇಟಿ, ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ, ರಿಜಿಸ್ಟ್ರಾರ್ ಹೆಚ್.ವಿ. ಇಂದ್ರಮ್ಮ, ಅಕಾಡೆಮಿ ಸದಸ್ಯರು, ಸಿಬ್ಬಂದಿ, ಕಲಾಸಮುದಾಯ ಮತ್ತು ಕಲಾಸಕ್ತರು ಸಾಕ್ಷಿಯಾದರು.




ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಅಕಾಡೆಮಿಯ ಕ್ಯಾಟ್‌ಲಾಕ್ ಬಿಡುಗಡೆಯ ಸಂದರ್ಭ.

## ಕ್ಯಾಟ್‌ಲಾಕ್ ಬಿಡುಗಡೆ

ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದ ಪ್ರಯುಕ್ತ ವಿಶೇಷವಾಗಿ ರೂಪಿಸಲಾದ ಗೌರವ ಪ್ರಶಸ್ತಿ ಪುರಸ್ಕೃತರು ಹಾಗೂ 44ನೇ ವಾರ್ಷಿಕ ಬಹುಮಾನ ವಿಜೇತರದ್ದೂ ಸೇರಿದಂತೆ ಮತ್ತಿತರರ ಕಲಾಕೃತಿಗಳುಳ್ಳ 'ಕ್ಯಾಟ್‌ಲಾಕ್' ಅನ್ನು ಸಚಿವರು ಬಿಡುಗಡೆಗೊಳಿಸಿದರು.

## ಕಲಾಗ್ಯಾಲರಿಯ ಭರವಸೆ

ಸಮಾರಂಭದಲ್ಲಿ ಮಾತನಾಡಿದ ಸಚಿವರು, ಬಾಗಲಕೋಟೆ ಜಿಲ್ಲೆಯಲ್ಲಿ ಲಲಿತಕಲಾ ವಿಶ್ವವಿದ್ಯಾಲಯ ಅತಿ ಶೀಘ್ರದಲ್ಲಿ ಸ್ಥಾಪನೆಯಾಗಲು ಅನುವಾಗುವಂತೆ ತಾವು ಮುಖ್ಯಮಂತ್ರಿಯೊಡನೆ ಮಾತುಕತೆ ನಡೆಸುವುದಾಗಿ ಹೇಳಿದರಲ್ಲದೆ, ಬಾಗಲಕೋಟೆಯಲ್ಲಿ ಕಲಾಗ್ಯಾಲರಿಯನ್ನು ಸ್ಥಾಪಿಸುವ ಮೂಲಕ ಕಲೆ ಮತ್ತು ಕಲಾವಿದರಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ಭರವಸೆ ನೀಡಿದರು.



ಸಚಿವ ಎಸ್.ಆರ್.ಪಾಟೀಲ್ ಅವರೊಂದಿಗೆ ಅಕಾಡೆಮಿ ಅಧ್ಯಕ್ಷರ ಸಮಾಲೋಚನೆ.

ಮುಖ್ಯ ಅತಿಥಿಗಳಾದ ಶಾಸಕ ಎಚ್.ವೈ. ಮೇಟಿ ಅವರು ಮಾತನಾಡಿ, ಜಕಣಾಚಾರಿ ಕಾಲದಿಂದ ರಾಜ್ಯದಲ್ಲಿ ಕಲೆ ಬೆಳೆದುಬಂದಿದ್ದು ದೈವದತ್ತವಾಗಿ ದೊರೆತ ಅವಕಾಶವನ್ನು ಕಲಾವಿದರು ಸದುಪಯೋಗಪಡಿಸಿಕೊಳ್ಳಬೇಕೆಂದರು.

## ಪ್ರತಿಭೆಯೇ ಮಾನದಂಡ

ಸರ್ಕಾರ ಲಲಿತಕಲಾ ಅಕಾಡೆಮಿಗೆ ನೀಡುವ ಅನುದಾನವನ್ನು ಬಹಳ ಎಚ್ಚರಿಕೆಯಿಂದ ಬಳಸಲಾಗುತ್ತಿದ್ದು ಪ್ರಶಸ್ತಿ ಪುರಸ್ಕೃತರ ಆಯ್ಕೆ ಸಂದರ್ಭದಲ್ಲಿ ಲೋಪವಾಗದಂತೆ ಎಚ್ಚರಿಕೆ ವಹಿಸಲಾಗಿದೆ. ಯಾವುದೇ ಶಿಫಾರಸ್ಸುಗಳಿಲ್ಲದೆ ಪ್ರತಿಭೆ ಹಾಗೂ ಪ್ರಾಮಾಣಿಕತೆಯನ್ನು ಮಾತ್ರವೇ ಗಮನಿಸಿ ಪ್ರಶಸ್ತಿಗೆ ಕಲಾವಿದರನ್ನು ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ತಿಳಿಸಿದರು.

## ಹೆಚ್ಚಿದ ಗೌರವಧನ

ಕಳೆದ ವರ್ಷ ಅಕಾಡೆಮಿಯ ಗೌರವ ಪ್ರಶಸ್ತಿ ಪ್ರದಾನದ ಸಂದರ್ಭದಲ್ಲಿ ಅಕಾಡೆಮಿ ಅಧ್ಯಕ್ಷರು ಪ್ರಸ್ತಾಪಿಸಿ ಮಂಡಿಸಿದ ಹಕ್ಕೊತ್ತಾಯದ ಫಲವಾಗಿ ಸರ್ಕಾರ ಅಕಾಡೆಮಿಯ ಗೌರವ ಪ್ರಶಸ್ತಿಯ ಮೊತ್ತವನ್ನು ಹತ್ತು ಸಾವಿರ ರೂಪಾಯಿಯಿಂದ ಐವತ್ತು ಸಾವಿರ ರೂಪಾಯಿಗೆ ಹಾಗೂ ವಾರ್ಷಿಕ ಬಹುಮಾನದ ಮೊತ್ತವನ್ನು ಐದು ಸಾವಿರ ರೂಪಾಯಿಯಿಂದ ಇಪ್ಪತ್ತೈದು ಸಾವಿರ ರೂಪಾಯಿಗೆ ಹೆಚ್ಚಿಸಿದ್ದು ಈ ಬಾರಿ ಆ ಮೊತ್ತವನ್ನು ವಿತರಿಸಿದ್ದು ವಿಶೇಷವಾಗಿತ್ತು.




ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭವನ್ನು
ಸಂಪನ್ನಗೊಳಿಸಿದ ಪ್ರೇಕ್ಷಕ ಮತ್ತು ಕಲಾವಿದ ಸಮೂಹ

# ನಿವೇದನೆ

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರತಿ ವರ್ಷ ಕೊಡಮಾಡುವ ವಾರ್ಷಿಕ ಗೌರವ ಪ್ರಶಸ್ತಿಗೆ ೨೦೧೫ನೇ ಸಾಲಿನಲ್ಲಿ ಪಾತ್ರರಾದವರು ಮೂವರು ಗಣ್ಯರು. ಆ ಪೈಕಿ ಮಣಿಪಾಲದ 'ಹೆರಿಟೇಜ್ ವಿಲೇಜ್' ಖ್ಯಾತಿಯ ವಿಜಯ ನಾಥ ಶೆಣೈ ಅವರು ಅನಾರೋಗ್ಯದ ಕಾರಣ ಬಾಗಲಕೋಟೆಯಲ್ಲಿ ಜರುಗಿದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿರುವುದರ ಪರಿಸ್ಥಿತಿಯನ್ನು ವಿವರಿಸಿ ಸ್ವತಃ ಶ್ರೀ ವಿಜಯನಾಥ ಶೆಣೈ ಅವರು ಅಕಾಡೆಮಿಗೆ ಪತ್ರ ಬರೆದು ತಮ್ಮ ಸಜ್ಜನಿಕೆಯ ದರ್ಶನ ಮಾಡಿಸಿದ್ದಾರೆ. ಅವರ ಪತ್ರದ ಸಾರಂಶ ಕಲಾವಲಯದ ಅವಗಾಹನೆಗೆ..

*"ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಮಾನ್ಯ ಶ್ರೀ ಎಂ.ಎಸ್. ಮೂರ್ತಿಯವರ ಸಮಕ್ಷಮದಲ್ಲಿ ಮಣಿಪಾಲದಿಂದ ವಿಜಯನಾಥ ಶೆಣೈ ಮಾಡುವ ವಂದನೆಗಳು.*

*ಕಲಾರಂಗದಲ್ಲಿನ ನನ್ನ ಚಿಕ್ಕಮಟ್ಟದ ಸೇವೆಯನ್ನು ಪರಿಗಣಿಸಿ ತಮ್ಮ ಅಕಾಡೆಮಿಯ ವತಿಯಿಂದ ಈ ಬಾರಿಯ ವಾರ್ಷಿಕ ಗೌರವ ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿದುದಕ್ಕಾಗಿ ತಮಗೆ ಹಾಗೂ ಅಕಾಡೆಮಿಯ ಸಕಲ ಪದಾಧಿಕಾರಿಗಳಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಮತ್ತಿತರ ಸಂಬಂಧ ಪಟ್ಟವರಿಗೆ ನನ್ನ ಆಭಾರವನ್ನು ಸೂಚಿಸುತ್ತೇನೆ.*



*ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತಮ್ಮೆಲ್ಲರೊಂದಿಗೆ ಪಾಲ್ಗೊಂಡು ನನ್ನ ಸಂತೋಷವನ್ನು ತಮ್ಮೊಡನೆ ಹಂಚಿಕೊಳ್ಳುತ್ತಿದ್ದೆ. ಇದೀಗ ನನ್ನ ವಯಸ್ಸು ೮೧ ದಾಟಿದೆ. ತುರ್ತು ನೆಲೆಯಲ್ಲಿ ಎರಡು ವಾರಗಳ ಹಿಂದೆಯಷ್ಟೆ ಹೃದಯದ ಶಸ್ತ್ರಚಿಕಿತ್ಸೆಯನ್ನು ಇಲ್ಲಿಯ ಆಸ್ಪತ್ರೆಯಲ್ಲಿ ಮಾಡಿಸಿಕೊಂಡೆ. ವೈದ್ಯರು ಪೇಸ್ ಮೇಕರ್ ಅನ್ನು ನನ್ನ ಹೃದಯಕ್ಕೆ ಜೋಡಿಸಿದ್ದಾರೆ. ಈಗ ಎಲ್ಲೂ ದೂರ ಪ್ರಯಾಣ ಮಾಡಲಾರದವನಾಗಿದ್ದೇನೆ. ತಮ್ಮೊಂದಿಗೆ ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಸ್ವೀಕರಿಸುವ ಭಾಗ್ಯದಿಂದ ವಂಚಿತನಾಗಿದ್ದೇನೆ. ಈ ನಿರುಪಾಯ ಸ್ಥಿತಿಯಲ್ಲಿ ತಾವು ದಯವಿಟ್ಟು ನನ್ನನ್ನು ಮನ್ನಿಸಬೇಕಾಗಿ ವಿನಮ್ರವಾಗಿ ಕೋರುತ್ತಾ ನನ್ನ ಕಾಯಕಕ್ಕೆ ಸಂಬಂಧಪಟ್ಟ ಕೆಳಗಿನ ನಾಲ್ಕು ಮಾತುಗಳನ್ನು ಆಡುತ್ತೇನೆ.*

ನಾನು ಚಿತ್ರಕಲೆ, ಶಿಲ್ಪಕಲೆ ಮತ್ತಿತರ ಕಲಾಪ್ರಕಾರಗಳ ಸೃಜನಶೀಲ ಕಲಾವಿದನಾಗದೆ ಹೋದರೂ ಕಳೆದ ಅನೇಕ ವರ್ಷಗಳಿಂದ ಕಲಾ ಕಾಯಕಗಳ ಸಂಘಟಕನಾಗಿ, ಕಲಾಕೃತಿಗಳ ಸಂಗ್ರಾಹಕನಾಗಿ, ಕಲಾ ಸಂಗ್ರಹಾಲಯಗಳ ನಿರ್ಮಾತೃನಾಗಿ ನನ್ನ ಕೈಂಕರ್ಯವನ್ನು ಕೈಗೊಳ್ಳುತ್ತಾ ಬಂದಿದ್ದೇನೆ.

ಕಲಾ ಸಂಘಟಕನಾಗಿ ಆರೆಂಟು ಚಿತ್ರಕಲೆಯ, ಶಿಲ್ಪಕಲೆಯ ಶಿಬಿರಗಳನ್ನೂ, ತರಬೇತಿ–ಕಮ್ಮಟಗಳನ್ನೂ ಹಸ್ತಶಿಲ್ಪ ನಿವೇಶನದಲ್ಲಿ ಸಂಘಟಿಸಿದೆ. ಸಂಗ್ರಾಹಕನಾಗಿ ಹಾಳು ಸುರಿಯುತ್ತಿರುವ–ವಿನಾಶದ ಅಂಚಿನಲ್ಲಿರುವ, ಆದರೆ ತಮ್ಮ ಕಲಾತ್ಮಕ ಸೌಂದರ್ಯದಿಂದ ಜನಮನದ ಕಣ್ಣು ಮನಸ್ಸನ್ನು ಮುದಗೊಳಿಸುತ್ತಿರುವ ಮೂವತ್ತರಷ್ಟು ಮನೆ, ಮಠ, ಮಂದಿರಗಳನ್ನು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಂದ ಸಂಗ್ರಹಿಸಿ ಮಣಿಪಾಲದ ಸರೋವರದ ತಟದಲ್ಲಿರುವ 'ಹೆರಿಟೇಜ್ ವಿಲೇಜ್' ಎಂಬ ಹೆಸರಿನ ಸಂಸ್ಕೃತಿ ಗ್ರಾಮದಲ್ಲಿ ಪುನರ್ನಿರ್ಮಿಸಿದ್ದೇನೆ.

ಈ ಯಾವತ್ತೂ ಕಟ್ಟಡಗಳಲ್ಲಿದ್ದ ಸುಂದರ ವಸ್ತು, ಪರಿಕರ, ಸಾಮಗ್ರಿ, ಸಲಕರಣೆ, ಚಿತ್ರಕೃತಿ–ಶಿಲ್ಪಕೃತಿಗಳನ್ನು ಜೋಪಾನವಾಗಿ, ಮನೋಜ್ಞವಾಗಿ ಆಯಾ ಕಟ್ಟಡಗಳಲ್ಲೇ ಜೋಡಿಸಿ, ಪೋಣಿಸಿ ಪ್ರದರ್ಶಿಸಿ ಇರಿಸಿದ್ದೇನೆ.

ಕಲಾಶೋಭೆಯನ್ನು ಬಿಂಬಿಸುವ ಈ ಪುರಾತನ ಕಟ್ಟಡಗಳನ್ನು ನಾನು ಸಂಗ್ರಹಿಸದೆ ಹೋಗಿದ್ದರೆ ಅವು ಎಂದೋ ನೆಲಸಮವಾಗುತ್ತಿದ್ದವು. ಛಿನ್ನವಾದ ಕಟ್ಟಡಗಳ ಕೌಷ್ಟಶಿಲ್ಪವನ್ನು ದುರಸ್ತಿಪಡಿಸಿ ಅವುಗಳ ಮೂಲ ಸ್ವರೂಪ ಮತ್ತು ಲಕ್ಷಣವನ್ನು ಉಳಿಸಲು ಪ್ರಯತ್ನಿಸಿದ್ದೇನೆ. ಈ ಕಟ್ಟಡಗಳಲ್ಲಿದ್ದ ತಾಮ್ರ, ಹಿತ್ತಾಳೆ, ಕಂಚು ಹಾಗೂ ಇತರ ಲೋಹಗಳ ಕಲಾತ್ಮಕ ವಸ್ತುಗಳನ್ನು, ಚಿತ್ರಕೃತಿ–ಶಿಲ್ಪಕೃತಿಗಳನ್ನು, ಮತ್ತಿತರ ಅನೇಕ ಸಂಖ್ಯೆಯ ಉಪಕರಣ, ಆಯುಧಗಳನ್ನು ನಾನು ಸಂಗ್ರಹಿಸದೆ ಹೋಗಿದ್ದರೆ ಅವೆಲ್ಲವೂ ಅಳಿದು ಹೋಗುತ್ತಿದ್ದವು. ಸಂದ ಯುಗದಲ್ಲಿ ಮಾನವ ನಿರ್ಮಿಸಿದ ಕಲಾ ಸೌಂದರ್ಯದ ವಾಸಗೃಹ ಮತ್ತಿತರ ಕಟ್ಟಡಗಳು ಮತ್ತು ಅವುಗಳಲ್ಲಿ ಬಳಸುತ್ತಿದ್ದ ವಸ್ತು, ಪರಿಕರಗಳು ಮುಂದಿನ ತಲೆಮಾರುಗಳ ಮಂದಿಯಲ್ಲಿ ಸ್ಫೂರ್ತಿ ಮತ್ತು ಪ್ರೇರಣೆಯನ್ನು ಒದಗಿಸಬಲ್ಲುವೆಂಬ ಪ್ರಜ್ಞೆಯಿಂದ ನಾನು ಈ ಕ್ಷೇತ್ರದಲ್ಲಿ ಕೈಗೊಂಡ ಕಾಯಕ ನನಗೆ ಕಿಂಚಿತ್ತಾದರೂ ಆತ್ಮತೃಪ್ತಿಯನ್ನು ಒದಗಿಸಿದೆ.

ಮೊತ್ತ ಮೊದಲಾಗಿ 'ಹಸ್ತಶಿಲ್ಪ' ಎಂಬ ಹೆಸರಿನ ವಾಸಗೃಹವನ್ನು ನಿರ್ಮಿಸಿದೆ. ಅನುದಿನ ನೂರಾರು ಸಂಖ್ಯೆಯ ಸಂದರ್ಶಕರು, ಹತ್ತಾರು ಸಂಖ್ಯೆಯ ಮಾಧ್ಯಮದವರು ಬರಲು ತೊಡಗಿದ್ದರಿಂದ ಆ ನಿವಾಸದಲ್ಲಿ ವಾಸ ದುಸ್ತರವೆನಿಸಿತು. ವಿಳಂಬ ಮಾಡದೆ 'ಹಸ್ತಶಿಲ್ಪ ಟ್ರಸ್ಟ್' ಎಂಬ ಹೆಸರಿನ ಪ್ರತಿಷ್ಠಾನವನ್ನು ರೂಪಿಸಿ ಅದನ್ನು ನೋಂದಾಯಿಸಿ ಕರ್ನಾಟಕ ಸರಕಾರದಿಂದ ಆರೂ ಎಕರೆ ಜಾಗವನ್ನು ಗೇಣಿನೆಲೆಯಲ್ಲಿ ಪಡೆದುಕೊಂಡು ಹೆರಿಟೇಜ್‌ವಿಲೇಜ್ ಅನ್ನು ಅಸ್ತಿತ್ವಕ್ಕೆ ತಂದೆ. ಬೇರೆ ಬೇರೆ ಮೂಲಗಳಿಂದ ನಿಧಿಯನ್ನು ಸಂಗ್ರಹಿಸಿ ಪಾಳುಬಿದ್ದ ಕಲಾತ್ಮಕ ಕಟ್ಟಡಗಳನ್ನು ಕ್ರಯಕ್ಕೆ ಪಡೆದುಕೊಂಡೆ, ಈ ವಾಸಗೃಹಗಳೇ

ಮೊದಲಾದ ಕಟ್ಟಡಗಳ ಪುನರ್ನಿರ್ಮಾಣದ ಜತೆಗೆನೇ ಕಲಾ ಸಂಗ್ರಹಾಲಯ (Museums)ಗಳನ್ನು ನಿರ್ಮಿಸಲು ತೊಡಗಿದೆ. ಭಾರತೀಯ ಪರಂಪರೆಯ ಚಿತ್ರಕೃತಿಗಳ ಸಂಗ್ರಹಾಲಯವನ್ನು ರೂಪುಗೊಳಿಸಿದೆ. ಮೈಸೂರು ಪೈಂಟಿಂಗ್, ಕಾಲಿಘಟ್ ಪೈಂಟಿಂಗ್, ಚಿತ್ರಣ ಚಿತ್ರಗಳು (Miniature paintings), ಗಾಜಿನ ಮೇಲಿನ ಚಿತ್ರಗಳು, ಮೈರಾ ಮಾಧ್ಯಮದ ಮೇಲಿನ ಚಿತ್ರಗಳು, ಕಲಮ್‌ಕರಿ, ಪಿಪ್‌ವ್ರ, ಚೆರುವಾಯ್, ಫಡ್, ಚಂಬಾ ಕುಮಾರ್, ಟಿಬೇಟನ್ ಟಂಗ್ಲಾ ಮೊದಲಾದ ವೈವಿಧ್ಯಮಯ ಚಿತ್ರಕೃತಿಗಳ ಸಂಗ್ರಹಾಲಯ ಅಸ್ತಿತ್ವಕ್ಕೆ ಬಂತು.

ಮರಾಠ ರಾಜ ಇಮ್ಮಡಿ ಸೆರ್ಫೋಜಿ ಇವರ ಕಾಲದ– ೧೭೦ ವರ್ಷಗಳಗೂ ಹಿಂದಿನ – ೧೭೦ರಷ್ಟು ತಂಜಾವೂರು ಶೈಲಿಯ ಚಿತ್ರಕೃತಿಗಳ ಮ್ಯೂಸಿಯಂ ಮೂಡಿಬಂತು.

ರಾಜಾ ರವಿವರ್ಮನ ಸಾಂಸ್ಕೃತಿಕ ಬಳುವಳಿ ಎಂಬ ಹೆಸರಿನ ಸಂಗ್ರಹಾಲಯದಲ್ಲಿ ರವಿವರ್ಮನ ಅಪಾರ ಸಂಖ್ಯೆಯ ಲಿಥೋಗ್ರಾಫ್ ಮಾತ್ರವಲ್ಲದೆ ಆತ ಬಳಸಿದ ಲಿಥೋ ಸ್ಟೋನ್ಸ್, ಮುದ್ರಣ ಮತ್ತಿತರ ಯಂತ್ರಗಳು ಮತ್ತು ಬಣ್ಣದ ಪುಡಿಗಳು ಹಾಗೂ ರವಿವರ್ಮನಿಂದ ಸ್ಫೂರ್ತಿ ಪಡೆದು ಚಿತ್ರಕೃತಿಗಳನ್ನು ರಚಿಸಿದ ಧುರಂಧರ್, ಮುಲಗಾಂವ್ಕರ್, ಎಸ್.ಎಂ ಪಂಡಿತ್ ಇವರೇ ಮೊದಲಾದವರ ಮೂಲ ಚಿತ್ರಕೃತಿಗಳನ್ನು ಪ್ರದರ್ಶಿಸಿದೆ.

ದೇಶದ ಎಲ್ಲಾ ಭಾಗಗಳಿಂದ ನೂರಾರು ಸಂಖ್ಯೆಯ ವಿಭಿನ್ನ ವಿನ್ಯಾಸಗಳ ಗಂಜೀಫಾ ಚಿತ್ರಕೃತಿಗಳನ್ನು ಸಂಗ್ರಹಿಸಿ ಅವುಗಳನ್ನು ಓರಣವಾಗಿ ಪ್ರದರ್ಶಿಸಿ ಸಂಗ್ರಹಾಲಯವನ್ನೂ ರೂಪಿಸಿದೆ.

ಜಿ.ರೇಘು ಮತ್ತು ಸ್ಯಾಮ್ ಅಡ್ಡೈಕಲ್‌ಸಾಮಿ ಇವರ ಸಮಕಾಲೀನ ಶಿಲ್ಪಕೃತಿಗಳ ಮತ್ತು ಚಿತ್ರಕೃತಿಗಳ ಪ್ರತ್ಯೇಕ ಎರಡು ಗ್ಯಾಲರಿಗಳನ್ನು ಅಸ್ತಿತ್ವಕ್ಕೆ ತಂದೆ. ಅಂತೆಯೇ ಕೆ.ಕೆ. ಹೆಬ್ಬಾರ್, ಲಕ್ಷ್ಮಣ ಪೈ, ಅಲಮೇಲಕರ್, ಆದಿಮೂಲಂ, ರಾಜವೇಲು, ಕೆ.ಎಸ್. ರಾವ್ ಇವರೇ ಮೊದಲಾದ ಕಲಾವಿದರ ಚಿತ್ರಕೃತಿಗಳನ್ನು ಶಾಶ್ವತವಾಗಿ ಪ್ರದರ್ಶಿಸುವ ಗ್ಯಾಲರಿಯನ್ನು ನಿರ್ಮಿಸಿದೆ.

ನಾನು ಅನುಕಾಲ ಸಂಗ್ರಹಿಸಿಕೊಂಡು ಬಂದಿದ್ದ, ಬೇರೆ ಬೇರೆ ಮಾಧ್ಯಮ ಗಳಲ್ಲಿ ಪ್ರಾಚೀನ ಕಾಲದಲ್ಲಿ ನಿರ್ಮಿಸಿದ್ದ – ಕಲಾವಸ್ತುಗಳ ಮತ್ತು ಕರಕುಶಲ ವಸ್ತುಗಳ ಸಂಗ್ರಹಾಲಯವನ್ನು (museum of arts and gifts) ಎರಡು ಮಹಡಿಗಳಲ್ಲಿ ರೂಪಿಸಿದೆ.

ನನ್ನ ಸಹಕಾರ್ಯಕರ್ತರನ್ನು ಸೇರಿಸಿ ನಾವು ರೂಪಿಸಿದ ಜಾನಪದ ಕಲಾ ಸಂಗ್ರಹಾಲಯ ಮುಖ್ಯವಾಗಿ ಕರ್ನಾಟಕದ ಬೇರೆ ಬೇರೆ ಭಾಗಗಳ ಸಾಂಸ್ಕೃತಿಕ ವೈವಿಧ್ಯವನ್ನು ಬಿಂಬಿಸುವ ಕೇಂದ್ರವಾಗಿದೆ. ತುಳು ನಾಡಿನ ದೈವಗಳ ಮೂರ್ತಿ ಶಿಲ್ಪ, ಮೊಗ ಮಾತ್ರವಲ್ಲದೆ ಗಗ್ಗರದಂತಹ ಪರಿಕರಗಳ ಎಲ್ಲಾ ಮಾದರಿಗಳನ್ನು ಇಲ್ಲಿ ಪ್ರದರ್ಶಿಸಿದ್ದೇನೆ. ಹಿಂದಿನ ಕಾಲದಲ್ಲಿ ದಿನನಿತ್ಯದ ಬಳಕೆಗಾಗಿ ಉಪಯೋಗಿ ಸುತ್ತಿದ್ದ ವಸ್ತು ವಿಶೇಷಗಳು ಕೂಡಾ ಈ ಸಂಗ್ರಹಾಲಯದಲ್ಲಿ ಒಳಗೊಂಡಿದೆ.

*ಬಸ್ತಾರ್ ಪ್ರದೇಶದ ಲೋಹ ಶಿಲ್ಪಕಲಾಕೃತಿಗಳ ಅಪೂರ್ವ ಸಂಗ್ರಹ ಜಾನಪದ ಕಲಾ ಸಂಗ್ರಹಾಲಯದಲ್ಲಿ ಒಳಗೊಂಡಿದೆ. ಬಸ್ತಾರ್‌ನ ವಿಶಿಷ್ಟ ಮಾದರಿಯ ಶ್ರೇಷ್ಠಶಿಲ್ಪದ ಮೊಗಗಳ ಪ್ರತ್ಯೇಕ ಗ್ಯಾಲರಿಯನ್ನು ನಿರ್ಮಿಸಿದೆ.*

*ಕಲಾವಳಿಯ ತುಳುನಾಡಿನ ಪುರಾತನ ಗರೋಡಿಯೊಂದನ್ನು ಹಿಂದಿನ ಮಾದರಿಯಲ್ಲಿ ನಿರ್ಮಿಸಿದ್ದೇನೆ. ಅದರ ಸನಿಹದಲ್ಲೇ ನಂದಿಕೇಶ್ವರನ ದೇವಾಲಯ ಹಾಗೂ ಪರಿವಾರ ದೈವಗಳ ದಾರುಶಿಲ್ಪದ ಊರುಗಳನ್ನು ನೆಲೆನಿಲ್ಲಿಸಿದ್ದೇನೆ. ಇದು ಕಲಾಗ್ಯಾಲರಿಯ ರೂಪ ತಳೆದಿದೆ.*

*ಹಿಂದಿನ ಕಾಲದ ರೇವು ಪಟ್ಟಣಗಳಲ್ಲಿ ವ್ಯಾಪಾರ ವಾಣಿಜ್ಯಕ್ಕಾಗಿ ಬಳಸುತ್ತಿದ್ದ ಮತ್ತು ಸಮುದ್ರಯಾನಕ್ಕೆ ಸಂಬಂಧಪಟ್ಟ ವಸ್ತು, ಪರಿಕರಗಳ ಮರ್ಕೈಂಟಲ್ ಮ್ಯೂಸಿಯಮ್ (mercantile museum) ಅನ್ನು ನಿರ್ಮಿಸಿದೆ. ಅಂತೆಯೇ ಜರ್ಮನ್ ಬಾಸೆಲ್ ಮಿಶನ್‌ನವರು ೧೫೦ ವರ್ಷಗಳ ಹಿಂದೆ ವಿನ್ಯಾಸಗೊಳಿಸಿ ನಿರ್ಮಿಸಿದ ಸುಟ್ಟ ಆವೆ ಮಣ್ಣಿನ (berretta) ಉತ್ಪನ್ನಗಳ ಸಂಗ್ರಹಾಲಯವನ್ನು ಅಸ್ತಿತ್ವಕ್ಕೆ ತಂದೆ.*

*ನೂರಾರು ಸಂಖ್ಯೆಯ ಹಳೆಯ ಮಾದರಿಯ ಮಕ್ಕಳ ಆಟಿಕೆಗಳನ್ನು ಹತ್ತಾರು ವರ್ಷಗಳಿಂದ ಸಂಗ್ರಹಿಸುತ್ತಾ ಬಂದಿದ್ದೆ. ಅವುಗಳೆಲ್ಲವನ್ನೂ ಜೋಡಿಸಿ ಮನೋಜ್ಞವಾಗಿ ಪ್ರದರ್ಶಿಸಿ ಮಕ್ಕಳ ಆಟಿಕೆಗಳ ಸಂಗ್ರಹಾಲಯವನ್ನು ರೂಪಿಸಿದೆ.*

*ಇಂತಹ ಅನೇಕ ಸಂಖ್ಯೆಯ ಕಲಾತ್ಮಕ ಕಟ್ಟಡಗಳನ್ನು, ಮನೆ, ಮಠ, ಮಂದಿರಗಳನ್ನು ಪುನರ್ನಿರ್ಮಿಸುವುದರೊಂದಿಗೆ ಮ್ಯೂಸಿಯಮ್ ಮತ್ತು ಗ್ಯಾಲರಿಗಳನ್ನು ನಿರ್ಮಿಸಿದ ತೃಪ್ತಿ ನನ್ನಲ್ಲಿದೆ. ನನ್ನ ಈ ಕಿಂಚಿತ್ ಪ್ರಮಾಣದ ಕಾಯಕವನ್ನು ಗುರುತಿಸಿ ಕರ್ನಾಟಕ ಲಲಿತಕಲಾ ಅಕಾಡೆಮಿ ನನಗೆ ನೀಡುತ್ತಿರುವ ವಾರ್ಷಿಕ ಗೌರವ ಪ್ರಶಸ್ತಿಗಾಗಿ ಇನ್ನೊಮ್ಮೆ ತಮಗೂ, ಸಂಬಂಧ ಪಟ್ಟ ಎಲ್ಲರಿಗೂ ನನ್ನ ಕೃತಜ್ಞತಾಭಾವವನ್ನು ವ್ಯಕ್ತಪಡಿಸುತ್ತೇನೆ. ತಮ್ಮೆಲ್ಲರೊಂದಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ಅಶಕ್ತನಾದುದಕ್ಕಾಗಿ ಮತ್ತೊಮ್ಮೆ ತಮ್ಮಲ್ಲಿ ಕ್ಷಮೆಯನ್ನು ಕೋರುತ್ತೇನೆ.*

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**ವಿಜಯನಾಥ ಶೆಣೈ**
೨೦೧೫–೧೬ನೇ ಸಾಲಿನ
**ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರು**

# ಅಭಿವ್ಯಕ್ತಿ ಕಲಾಶಿಬಿರ

**ಕ**ರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಮೈಸೂರಿನ ರಂಗಾಯಣ ಸಂಯುಕ್ತವಾಗಿ ಮೈಸೂರಿನಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಸಂದರ್ಭದಲ್ಲಿ ಅಭಿವ್ಯಕ್ತಿ ಕಲಾಶಿಬಿರವನ್ನು ಆಯೋಜಿಸಿದ್ದವು.

ಜನವರಿ ೧೩ರಿಂದ ೧೬ರವರೆಗೆ ನಾಲ್ಕು ದಿನಗಳ ಕಾಲ ಮೈಸೂರಿನ ಕಲಾ ಮಂದಿರದ ಸುಚಿತ್ತರಾ ಆರ್ಟ್ ಗ್ಯಾಲರಿಯಲ್ಲಿ ನಡೆದ ಅಭಿವ್ಯಕ್ತಿ ಕಲಾ ಶಿಬಿರವನ್ನು ೧೩ರ ಬೆಳಗ್ಗೆ ಹನ್ನೊಂದು ಗಂಟೆಗೆ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಉದ್ಘಾಟಿಸಿದರು.

ಮೈಸೂರಿನ ಸ್ವೀಟ್ಸ್ ಹಾಗೂ ಭೀಮಾ ಪ್ರಾಪರ್ಟೀಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶಿವಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ಪಿ. ನಾಗೇಶ್, ರಂಗಸಮಾಜದ ಸದಸ್ಯರು, ಚಿಂತಕರೂ ಆದ ಪ್ರೊ. ಬಿ.ಕೆ.ಗೋವಿಂದರಾವ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮೈಸೂರು ರಂಗಾಯಣದ ನಿರ್ದೇಶಕರಾದ ಶ್ರೀ ಎಚ್.ಜನಾರ್ಧನ (ಜನ್ನಿ) ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಅಕಾಡೆಮಿಯ ರಿಜಿಸ್ಟ್ರಾರ್ ಕೆ.ಸುಧೀಂದ್ರ, ರಂಗಾಯಣದ ಉಪ ನಿರ್ದೇಶಕರಾದ ಎಸ್.ಐ. ಭಾವಿಕಟ್ಟಿ, ಅಕಾಡೆಮಿ ಸಿಬ್ಬಂದಿ, ಕಲಾವಿದರು ಮತ್ತು ಕಲಾರಸಿಕರು ಉಪಸ್ಥಿತರಿದ್ದರು.

ನಾಲ್ಕು ದಿನಗಳ ಕಾಲ ಜರುಗಿದ ಕಲಾಶಿಬಿರದಲ್ಲಿ ಕಲಾವಿದರಾದ ಮಂಗಳೂರಿನ ಸುನೀಲ್ ಮಿಶ್ರ, ಗಣೇಶ್ ಸೋಮಯಾಜಿ, ಬೆಂಗಳೂರಿನ ಸುಪ್ರೀತ್ ಅಡಿಗ, ಗಿಲಿಯಾಳ್ ಜಯರಾಮ್‌ಭಟ್, ಬೀದರ್‌ನ ರಾಜಕುಮಾರ್ ಬಿ.ಬಾರಸಿಂಗಿ, ಧಾರವಾಡದ ಅನಿಮೇಶ್ ನಾಗನೂರ, ದಾವಣಗೆರೆಯ ಶಶಿಕುಮಾರ್ ಕೆ.ಎಸ್., ತುಮಕೂರಿನ ಮಂಜುನಾಥ್ ಎಚ್.ಎಲ್ ಮತ್ತು ಮಂಗಳೂರಿನ ಶರತ್ ಹೊಳ್ಳ ಅವರು ಕಲಾಕೃತಿಗಳನ್ನು ರಚಿಸಿಕೊಟ್ಟು ಶಿಬಿರಕ್ಕೆ ಸಾರ್ಥಕತೆ-ಕಲಾತ್ಮಕತೆ ತಂದುಕೊಟ್ಟರು.

### ಸಂಕ್ರಾಂತಿ ರೇಖಾ ಚಿತ್ರ ಶಿಬಿರ

ಕರ್ನಾಟಕ ಲಲಿತಕಲಾ ಅಕಾಡೆಮಿಯು ದಾವಣಗೆರೆಯ ಸಿದ್ಧಗಂಗಾ ವಿದ್ಯಾ ಸಂಸ್ಥೆಯ ಸಹಯೋಗದಲ್ಲಿ ದಾವಣಗೆರೆಯಲ್ಲಿ ಪ್ರೌಢಶಾಲಾ ವಿದ್ಯಾರ್ಥಿ ಗಳಿಗೆ ರೇಖಾ ಚಿತ್ರ ಶಿಬಿರವನ್ನು ಆಯೋಜಿಸಿತ್ತು. ೨೦೧೬ರ ಜನವರಿ ೧೬ರಂದು ಸಂಕ್ರಾಂತಿ ಹಬ್ಬದ ದಿನದಂದು ನಡೆದ ಈ ಶಿಬಿರದಲ್ಲಿ ಸುಮಾರು ೪೮೬

ವಿದ್ಯಾರ್ಥಿಗಳು ಭಾಗವಹಿಸಿ ಸಂಕ್ರಾಂತಿಯ ಬಗ್ಗೆ ರೇಖಾ ಚಿತ್ರಗಳನ್ನು ರಚಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಕಲಾವಿದ ಮಲ್ಲಿಕಾರ್ಜುನ ಜಾಧವ್ ಅವರು ರೇಖೆಗಳ ಮಹತ್ವ ಮತ್ತು ರೇಖೆಗಳ ಸ್ವರೂಪದ ಕುರಿತು ಉಪನ್ಯಾಸ ನೀಡಿದರು. ಶಾಲೆಯ ಸಂಸ್ಥಾಪಕರಾದ ಶಿವಣ್ಣ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾದ ಮಹಾಲಿಂಗಪ್ಪ ಅವರು ಶಿಬಿರದ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು. ಶಾಲಾ ಮುಖ್ಯ ಶಿಕ್ಷಕ ಜಸ್ಸಿನ ಡಿಸೋಜ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

**ತಿಂಗಳ ಚಿತ್ರ –೧**



**ಅಕಾಡೆಮಿಯ 'ತಿಂಗಳ ಚಿತ್ರ' ಕಲಾಪ್ರದರ್ಶನವನ್ನು ಉದ್ಘಾಟಿಸುತ್ತಿರುವ ಹಿರಿಯ ಪತ್ರಕರ್ತ, ಲೇಖಕ ಶ್ರೀ ಆರ್.ಜಿ.ಹಳ್ಳಿ ನಾಗರಾಜ್. ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ರಿಜಿಸ್ಟ್ರಾರ್ ಹೆಚ್.ವಿ.ಇಂದ್ರಮ್ಮ ಅವರ ಉಪಸ್ಥಿತಿ.**

ಕರ್ನಾಟಕ ಲಲಿತಕಲಾ ಅಕಾಡೆಮಿಯು ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಪ್ರತಿ ತಿಂಗಳು ನಡೆಸುತ್ತಿರುವ ಯುವಕಲಾವಿದರ ಕೃತಿಗಳ ಕಲಾ ಪ್ರದರ್ಶನ 'ತಿಂಗಳ ಚಿತ್ರ' ಕಾರ್ಯಕ್ರಮದ ಹೊಸ ವರ್ಷದ ಮೊದಲ ಕಂತು ಜನವರಿಯಲ್ಲಿ ನಡೆಯಿತು.

ಜನವರಿ ೨೦ರಂದು ಲಲಿತಕಲಾ ಅಕಾಡೆಮಿಯ 'ವರ್ಣಗ್ಯಾಲರಿ' ಯಲ್ಲಿ ನಡೆದ 'ತಿಂಗಳ ಚಿತ್ರ' ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ, ಬರಹಗಾರ ಆರ್.ಜಿ.ಹಳ್ಳಿ ನಾಗರಾಜ್ ಅವರು ಉದ್ಘಾಟಿಸಿದರು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿಯ ರಿಜಿಸ್ಟ್ರಾರ್ ಕೆ. ಸುಧೀಂದ್ರ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಎಚ್.ವಿ. ಇಂದ್ರಮ್ಮ, ಕಲಾವಿದರು ಮತ್ತು ಕಲಾಸಕ್ತರು ಉಪಸ್ಥಿತರಿದ್ದರು.



ಯುವಕಲಾವಿದರ ಕಲಾಕೃತಿಗಳ ವೀಕ್ಷಣೆಯಲ್ಲಿ ಶ್ರೀ ಆರ್.ಜಿ.ಹಳ್ಳಿ ನಾಗರಾಜ್, ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ರಿಜಿಸ್ಟ್ರಾರ್ ಹೆಚ್.ವಿ.ಇಂದ್ರಮ್ಮ ಮತ್ತಿತರರು.

'ತಿಂಗಳ ಚಿತ್ರ'ದಲ್ಲಿ ಯುವ ಕಲಾವಿದರಾದ ಶಹನಾಜ್ ಭಾನು, ರವಿ ನಾಯಕ, ವಿಶ್ವೇಶ್ವರ ಎಂ. ಪಟಗಾರ ಮತ್ತು ಝೂಕೀರ್ ಹುಸೇನ್. ಎಂ. ಅವರ ಕಲಾಕೃತಿಗಳು ಪ್ರದರ್ಶನಗೊಂಡವು. ಜನವರಿ ೨೦ರಿಂದ ೨೪ರವರೆಗೆ ಐದು ದಿನಗಳ ಕಾಲ ಬೆಳಗ್ಗೆ ೧೧ರಿಂದ ಸಂಜೆ ೬ರವರೆಗೆ ನಡೆದ ಕಲಾಪ್ರದರ್ಶನ ಕಲಾವಲಯದ ಗಮನಸೆಳೆಯಿತು. ಕಲಾಸಕ್ತರ ಮನಗೆದ್ದಿತು.

**ಬೀಳ್ಗೊಡುಗೆ**

ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದ ಕೆ.ಸುಧೀಂದ್ರ ಅವರು ಸೇವೆಯಿಂದ ನಿವೃತ್ತಿಯಾದ ಹಿನ್ನೆಲೆಯಲ್ಲಿ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.



ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಕೆ. ಸುಧೀಂದ್ರ ಅವರಿಗೆ ಅಕಾಡೆಮಿ ಬಳಗದಿಂದ ಆತ್ಮೀಯ ಬೀಳ್ಕೊಡುಗೆ.

ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜನವರಿ ೩೧ರಂದು ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಸುಧೀಂದ್ರ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಲಾಯಿತು. ಆನಂತರ ಸುಧೀಂದ್ರ ಅವರಿಗೆ ಶಾಲು ಹೊದಿಸಿ ನೆನಪಿನ ಕಾಣಿಕೆಯಿತ್ತು ಸನ್ಮಾನಿಸಿ ಆಪ್ತವಾಗಿ ಬೀಳ್ಕೊಡಲಾಯಿತು.

ಅಕಾಡೆಮಿಯ ಸದಸ್ಯರಾದ ಮಹಾಲಿಂಗಪ್ಪ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅಕಾಡೆಮಿಯ ಬಹುತೇಕ ಸದಸ್ಯರು ಬೀಳ್ಕೊಡುಗೆ ಸಮಾರಂಭಕ್ಕೆ ಸಾಕ್ಷಿಯಾದರು.

**ಮಾಗಿ ಕಲಾ ಶಿಬಿರ**




**'ಮಾಗಿ ಕಲಾಶಿಬಿರ'ದ ಉದ್ಘಾಟನೆಗೆ ಸಾಕ್ಷಿಯಾದ ಸಾಹಿತಿ ತುಂಬಾಡಿ ರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಅಕಾಡೆಮಿ ಅಧ್ಯಕ್ಷರೊಂದಿಗೆ ಶಿಬಿರದ ಕಲಾವಿದರು.**

ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಕಲಾಶಿಬಿರ 'ಮಾಗಿ ಕಲಾ ಶಿಬಿರ' ಫೆಬ್ರವರಿಯಲ್ಲಿ ಜರುಗಿತು.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ 'ಶಿಲ್ಪವನ' ದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಸಾಹಿತಿ ತುಂಬಾಡಿ ರಾಮಯ್ಯ ಅವರು 'ಮಾಗಿ ಕಲಾ ಶಿಬಿರ' ಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತ ವಿಭಾಗದ ಜಂಟಿ ನಿರ್ದೇಶಕರಾದ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಲಾವಿದರಿಗೆ ಶುಭಕೋರಿದರು. ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಅವರು ಅಧ್ಯಕ್ಷತೆ ವಹಿಸಿ ಶಿಬಿರದ ಆಶಯವನ್ನು ಕಲಾವಿದರಿಗೆ ತಿಳಿಸಿದರು. ರಿಜಿಸ್ಟ್ರಾರ್ ಹೆಚ್.ವಿ. ಇಂದ್ರಮ್ಮ, ಅಕಾಡೆಮಿ ಸದಸ್ಯರು, ಸಿಬ್ಬಂದಿ ಮತ್ತು ಕಲಾವಿದರ ದಂಡಿನ ಉಪಸ್ಥಿತಿಗೆ ಶಿಲ್ಪವನ ಸಾಕ್ಷಿಯಾಯಿತು.

ಫೆಬ್ರವರಿ ೧೫ರಿಂದ ೧೮ರವರೆಗೆ ನಾಲ್ಕು ದಿನಗಳ ಕಾಲ ಜರುಗಿದ 'ಮಾಗಿ ಕಲಾ ಶಿಬಿರ'ದಲ್ಲಿ ಕಲಾವಿದರಾದ ಕೊಪ್ಪಳದ ರಾಜು ತೇರದಾಳ್, ಕಲ್ಬುರ್ಗಿಯ ಪರಶುರಾಮ್.ಪಿ, ಯಾದಗಿರಿಯ ನರಸಿಂಹಲು .ಪಿ.ಬ್ಯಾಗೇರ, ಚಾಮರಾಜನಗರದ ಎಂ. ಮಂಚಯ್ಯ, ಬೆಳಗಾವಿಯ ಶ್ರೀಮತಿ ಮಾಧುರಿ ದೊಡ್ಡಮನಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದಿನೇಶ್. ಬಿ. ಭಜಂತ್ರಿ, ತುಮಕೂರಿನ ಎಸ್.ಮಂಜುನಾಥ್, ಕೋಲಾರದ ಎಂ.ಜಿ.ಅಮೂಲ್ಯ, ಮೈಸೂರಿನ ಶಿವಮರಿ, ಬೀದರ್‌ನ ಸುಶೀಲ್ ಕುಮಾರ್ ಬಡಿಗೇರ್, ಹುಬ್ಬಳ್ಳಿಯ ಶರದ್ ಕಾಂಬ್ಳೆ, ದಾವಣಗೆರೆಯ ಡಿ.ಎಚ್.ಸುರೇಶ್, ರಾಯಭಾಗ್‌ನ ಪ್ರಶಾಂತ್ ಕಲ್ಲೋಳಿ, ವಿಜಯಪುರದ ಮುತು ಮಡಿಕೇಶ್ವರ ಮತ್ತು ಹುನಗುಂದದ ಶ್ರೀಮತಿ ಎಸ್.ಎ. ಮುಂಡೆವಾಡಿ ಅವರು ಪಾಲ್ಗೊಂಡು ತಲಾ ಎರಡೆರಡು ಕಲಾಕೃತಿಗಳನ್ನು ರಚಿಸಿಕೊಟ್ಟರು.#

**ತಿಂಗಳ ಚಿತ್ರ – ೨**



**ಅಕಾಡೆಮಿಯ 'ತಿಂಗಳ ಚಿತ್ರ' ಮಾಲಿಕೆಯ ವರ್ಷದ ಎರಡನೇ ಕಲಾಪ್ರದರ್ಶನಕ್ಕೆ ವಿದ್ಯುಕ್ತ ಚಾಲನೆ ದೊರೆತ ಸಂದರ್ಭದಲ್ಲಿ ಹಿರಿಯ ಕವಯತ್ರಿ ಪ್ರತಿಭಾ ನಂದಕುಮಾರ್, ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಮತ್ತಿತರರು.**

ಕರ್ನಾಟಕ ಲಲಿತಕಲಾ ಅಕಾಡೆಮಿಯ 'ತಿಂಗಳ ಚಿತ್ರ' ಮಾಲಿಕೆಯ ಈ ವರ್ಷದ ಎರಡನೇ ಕಾರ್ಯಕ್ರಮ ಫೆಬ್ರವರಿಯಲ್ಲಿ ನಡೆಯಿತು.

'ವರ್ಣ ಗ್ಯಾಲರಿ'ಯಲ್ಲಿ ಫೆಬ್ರವರಿ ೧೮ರಂದು ಕವಯತ್ರಿ, ಪತ್ರಕರ್ತೆ ಪ್ರತಿಭಾ ನಂದಕುಮಾರ್ ಅವರು ಶಿಬಿರವನ್ನು ಉದ್ಘಾಟಿಸಿದರು. ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಿಜಿಸ್ಟಾರ್ ಹೆಚ್.ವಿ.ಇಂದ್ರಮ್ಮ, ಕಲಾವಿದರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಯುವಪ್ರತಿಭೆಗಳ ಕಲಾಕೃತಿಗಳ ವೀಕ್ಷಣೆಯಲ್ಲಿ ತಲ್ಲೀನವಾಗಿರುವ
ಅತಿಥಿ ಗಣ್ಯರು, ಅಕಾಡೆಮಿ ಅಧ್ಯಕ್ಷರು ಮತ್ತು ಕಲಾವಿದರು

ಐದು ದಿನಗಳ ಕಾಲ ನಡೆದ ಕಲಾಪ್ರದರ್ಶನದಲ್ಲಿ ಯುವ ಕಲಾವಿದರಾದ ಸುರೇಶ್ ಎಸ್.ಆವಂತಿ, ಕಿರಣ್ .ಬಿ.ಹಿರೇಮಠ, ಯು. ಮೌನೇಶ್ ಮತ್ತು ನಿರಂಜನ್ ಕೆ. ಮಕಾಳ ಅವರ ಕಲಾಕೃತಿಗಳು ಪ್ರದರ್ಶಿತಗೊಂಡು ಮನಸೆಳೆದವು.

## ಜಾನಪದ ವಿಶ್ವವಿದ್ಯಾನಿಲಯದಲ್ಲಿ 'ಸಾಂಸ್ಕೃತಿಕ ಪ್ರತಿಮೆಗಳು' ಕಲಾ ಶಿಬಿರ

ಹಾವೇರಿಯ ಗೊಟಗೂಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ 'ಸಾಂಸ್ಕೃತಿಕ ಪ್ರತಿಮೆಗಳು' ಕಲಾಶಿಬಿರವನ್ನು ಹಮ್ಮಿಕೊಂಡಿತ್ತು.

ಫೆಬ್ರವರಿ ೨೯ರಿಂದ ಮಾರ್ಚ್ ೩ರವರೆಗೆ ನಾಲ್ಕು ದಿನಗಳ ಕಾಲ ವಿಶ್ವವಿದ್ಯಾಲಯದ ಆಡಳಿತ ಭವನದ ಆವರಣದಲ್ಲಿ ನಡೆದ ಶಿಬಿರವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಕೆ. ಚಿನ್ನಪ್ಪಗೌಡ ಅವರು ಉದ್ಘಾಟಿಸಿದರು. ಧಾರವಾಡದ ಹಿರಿಯ ಕಲಾವಿದರಾದ ಎಂ.ಆರ್.ಬಾಳೀಕಾಯಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಅಕಾಡೆಮಿಯ ಅಧ್ಯಕ್ಷರಾದ ಡಾ.ಎಂ.ಎಸ್.ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿ ರಿಜಿಸ್ಟಾರ್ ಹೆಚ್.ವಿ.ಇಂದ್ರಮ್ಮ, ಜಾನಪದ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಡಿ.ಬಿ.ನಾಯಕ್, ವಿವಿಯ ಜಾನಪದ ಕಲಾವಿಭಾಗದ ಶಹಜಹಾನ್ ಮುದಕವಿ, ಡಾ. ವಿಜಯಲಕ್ಷ್ಮಿ ಗೇಟಿಯವರ್, ಅಕಾಡೆಮಿ ಸದಸ್ಯರು, ಕಲಾವಿದರು ಉದ್ಘಾಟನಾ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಶಿಬಿರದಲ್ಲಿ ಕಲಾವಿದರಾದ ಬೆಂಗಳೂರಿನ ಬಿ.ಜಿ.ಗುಜ್ಜಾರಪ್ಪ, ಅಶೋಕ್. ಯು, ಹಂಪಿಯ ಕೆ.ಕೆ.ಮಕಾಳ, ಚಿತ್ರದುರ್ಗದ ಸಂತೋಷ್ ಅಂಬರಕರ್, ಹಾಸನದ ಹೆಚ್.ಪಿ. ಮಂಜುನಾಥ್, ಗದಗದ ಕೆ.ಎಂ. ಕೃಷ್ಣ, ಹುಬ್ಬಳ್ಳಿಯ ಕೆ.ವಿ.ಶಂಕರ್, ವಿಟ್ಲದ ವಿ.ಮನೋಹರ್, ವಿಜಯಪುರದ ಡಾ. ಶಶಿಕಲಾ



ಲಲಿತಕಲೆ ಸಂಸ್ಕೃತಿಯ ಅವಿ

ಬಾಗಲಕೋಟದಲ್ಲಿ ರಾಜ್ಯ ಲಲಿತಕಲ

# Painting expo held in Bagalko

AGALKOT: Only educated eople can not amend socie- /. Folklore traditions and rtistes can bring positive hanges in society, opined arnataka Lalitakala Acade- y Chairman M S Murthy.

He was speaking at the 44th nual painting exhibition ntly organised by Karnataka litakala Academy and Kan- da & Culture Department at labhavana in Bagalkot on day.

He said, earlier fine arts in- ding painting was an effective medium of communication. However, it is unfortunate that in these days it has been neglected, he added.

He said, a total of 905 paintings were received for exhibition. Of them, 100 best paintings were selected for the exhibition. The artistes were selected for award transparently, he stated.

Speaking after inaugurating the exhibition, Jamkhandi's senior artist Vijay Sindhur suggested that the government should encourage the artistes to exhibit their talen Academy members s recognise the young ta artists and should strive vide government facili them and people too sho courage the artists, h pealed.

Kannada & Culture D ment Assistant Dir Shrishail Karishankar spoke on the occasion.

Academy Registrar Indr H V, member Khasim Ka and others were present.

**DH News Service**

ಅಕ್ಷರದ ತಾಯಿ ದೃಶ್ಯಕಲೆ; ವ

ಮುಖ್ಯಾಂಶಗಳು

ಂದಿನ ಶಿಕ್ಷಣ ವ್ಯವಸ್ಥೆ ಅವ್ಯ

ಶಿಕ್ಷಕರ ಕಮ್ಮಟದ ಸಮಾರೋಪ ಸಮಾರಂಭದಲ್ಲಿ ಎಚ್

ಮಕ್ಕಳಲ್ಲಿ ಆತ್ಮವಿಶ್ವಾಸ ಬ

ಕರ್ನಾಟಕ ಕಲಾ


ಅಕಾಡೆಮಿಯ ಮಾಧ್ಯಮ ಚಿತ್ರಗಳು
ಜಿಲ್ಲೆಗೆ ಆರ್ಟ್ ಗ್ಯಾಲರಿ ಅಗತ್ಯ
ಕಲಾ ಪ್ರದರ್ಶನ ಉದ್ಘಾಟನೆ
Gallery to Come Up In Bagalkot: Minister



ಹಾವೇರಿಯಲ್ಲಿ ಹಮ್ಮಿಕೊಂಡಿದ್ದ 'ಸಾಂಸ್ಕೃತಿಕ ಪ್ರತಿಮೆಗಳು' ಶಿಬಿರವನ್ನು ಉದ್ಘಾಟಿಸುತ್ತಿರುವ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರೊಟ್ಟಿಗೆ ಗಣ್ಯರ ಸಮೂಹ.

ಹೂಗಾರ್ ಮತ್ತು ಯಾದಗಿರಿಯ ಸುಜಾತ ಎಸ್. ಆವಂತಿ ಅವರು ತಲಾ ಎರಡು ಕಲಾಕೃತಿಗಳನ್ನು ರಚಿಸುವ ಮೂಲಕ ಶಿಬಿರಕ್ಕೆ ಸಾರ್ಥಕತೆಯನ್ನು ತಂದುಕೊಟ್ಟರು.

ಮಾರ್ಚ್ ೩ರ ಮಧ್ಯಾಹ್ನ ನಡೆದ ಸಮಾರೋಪ ಸಮಾರಂಭದಲ್ಲಿ ಗದಗ ಜಿಲ್ಲೆಯ ಹಿರಿಯ ಕಲಾವಿದರಾದ ಅಶೋಕ್ ಅಕ್ಕಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಿವಿ ಕುಲಪತಿಗಳಾದ ಪ್ರೊ. ಕೆ. ಚಿನ್ನಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿ ಅಧ್ಯಕ್ಷರು ಸಮಾರೋಪ ಭಾಷಣ ಮಾಡಿದರು.

### 'ಕರ್ನಾಟಕದಲ್ಲಿ ಕಲಾಶಿಕ್ಷಣ'



ಮೈಸೂರಿನಲ್ಲಿ ನಡೆದ 'ಕರ್ನಾಟಕದಲ್ಲಿ ಕಲಾಶಿಕ್ಷಣ' ಕಮ್ಮಟವನ್ನು ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ಉದ್ಘಾಟಿಸಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕ ಬಿ.ಕೆ.ಬಸವರಾಜ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರಾದ ಕೆ.ಸಿ.ಮಹದೇವಶೆಟ್ಟಿ, ಅಕಾಡೆಮಿ ಸದಸ್ಯರಾದ ಮಹಲಿಂಗಪ್ಪ, ಸಿ. ಚಿಕ್ಕಣ್ಣ.

ಕರ್ನಾಟಕದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾ ಶಿಕ್ಷಕರನ್ನು ಒಟ್ಟುಗೂಡಿಸುವ ಯತ್ನದ ಮೂರ್ತರೂಪವಾಗಿ 'ಕರ್ನಾಟಕದಲ್ಲಿ ಕಲಾ ಶಿಕ್ಷಣ' ಕಲಾಶಿಕ್ಷಕರ ಕಮ್ಮಟ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯಿತು.

ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಮೈಸೂರಿನ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಸಂಯುಕ್ತವಾಗಿ ೨೦೧೭ರ ಮಾರ್ಚ್ ೨ ಮತ್ತು ೩ ರಂದು ಕಮ್ಮಟವನ್ನು ಆಯೋಜಿಸಿದ್ದವು.

ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನಲ್ಲಿ ನಡೆದ ಕಮ್ಮಟ ಕರ್ನಾಟಕದಲ್ಲಿ ಕಲಾಶಿಕ್ಷಣ ಬೆಳೆದುಬಂದ ಬಗೆ, ಸಾಗಿರುವ ಹಾದಿ, ಸಾಗಬೇಕಿರುವ ದಿಕ್ಕುಗಳ ಕುರಿತು ಚಿಂತನ ಮಂಥನ ನಡೆಸಿತು.

ಹಿರಿಯ ಸಾಹಿತಿಗಳಾದ ಪ್ರೊ. ಕಾಳೇಗೌಡ ನಾಗವಾರ ಅವರು ಕಮ್ಮಟಕ್ಕೆ ಚಾಲನೆ ನೀಡಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಸಹನಿರ್ದೇಶಕರಾದ ಬಿ.ಕೆ.ಬಸವರಾಜ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಪ್ರಾಚಾರ್ಯರಾದ ಕೆ.ಸಿ. ಮಹದೇವಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಅಧ್ಯಕ್ಷತೆ ವಹಿಸಿದ್ದರು.




ಕಮ್ಮಟದಲ್ಲಿ ವಿಷಯತಜ್ಞರಿಂದ ವಿಚಾರಮಂಡನೆ.

ಮೊದಲನೇ ದಿನ ಎರಡು ಮತ್ತು ಎರಡನೇ ದಿನ ಮೂರು ಗೋಷ್ಠಿಗಳು ನಡೆದವು. ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರಾದ ಬಿ.ಕೆ. ಬಸವರಾಜ ಅವರು 'ಶಿಕ್ಷಣದಲ್ಲಿ ಕಲಾ ಶಿಕ್ಷಕರ ಪಾತ್ರ' ಕುರಿತು ವಿಚಾರ ಮಂಡಿಸುವುದರೊಂದಿಗೆ ಗೋಷ್ಠಿಗಳ ಸಾಲಿಗೆ ಮುನ್ನುಡಿ ಬರೆಯಲಾಯಿತು.


ಹಂಪಿಯ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಎಚ್.ಎಸ್.ಕೃಷ್ಣೇಗೌಡ ಅವರು 'ಪ್ರಸ್ತುತ ಕರ್ನಾಟಕ ಕಲಾ ಶಿಕ್ಷಣದ ಸ್ಥಿತಿ–ಗತಿಗಳು' ಕುರಿತು ವಿಚಾರ ಲಹರಿಯನ್ನು ತೆರೆದಿಟ್ಟರು.

ಮರುದಿನ ಮಾರ್ಚ್ ೨ರ ಬುಧವಾರದಂದು ತುಮಕೂರಿನ ರವೀಂದ್ರ ಕಲಾನಿಕೇತನ ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಹೆಚ್. ಬಾಬುರಾವ್ ಅವರು 'ಶಿಕ್ಷಣದಲ್ಲಿ ಚಿತ್ರಕಲೆಯ ಪಾತ್ರ'ದ ಬಗ್ಗೆ ತಿಳಿಸಿ ಕೊಟ್ಟರು. ಬಾದಾಮಿ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ ಡಾ.ಎಸ್.ಸಿ. ಪಾಟೀಲ್ ಅವರು 'ಕರ್ನಾಟಕದ ಕಲಾಶಿಕ್ಷಣ ಬೆಲೆ-ಹಿನ್ನೆಲೆ_ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಅವರು 'ಮಕ್ಕಳ ಚಿತ್ರಕಲೆ' ಕುರಿತು ವಿಚಾರ ಮಂಡಿಸಿದರು. ಎರಡೂ ದಿನ ಗೋಷ್ಠಿಗಳ ಬಳಿಕ ಕಮ್ಮಟದಲ್ಲಿ ಭಾಗವಹಿಸಿದ್ದ ಶಿಕ್ಷಕರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಪ್ರಬಂಧಕರೊಂದಿಗೆ ಶಿಕ್ಷಕರು ಮುಕ್ತವಾಗಿ ಚರ್ಚಿಸಿ ಹಲವು ಹೊಸ ವಿಚಾರಗಳನ್ನು ತಿಳಿದುಕೊಂಡರು.

ಕಮ್ಮಟದ ಎರಡನೇ ದಿನ ಸಂಜೆ ಜರುಗಿದ ಸಮಾರೋಪ ಸಮಾರಂಭದಲ್ಲಿ ಮೈಸೂರು ರಂಗಾಯಣದ ನಿರ್ದೇಶಕರಾದ ಜನಾರ್ದನ್(ಜನ್ನಿ) ಅವರು ಸಮಾರೋಪ ನುಡಿಗಳನ್ನು ಆಡಿದರು. ಶಿಲ್ಪಕಲಾ ಅಕಾಡೆಮಿಯ ಮೈಸೂರು ಭಾಗದ ಸದಸ್ಯರಾದ ಎಲ್.ಶಿವಲಿಂಗಪ್ಪ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್. ಮೂರ್ತಿ ಅವರು ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿಯ ಸದಸ್ಯರಾದ ಸಿ. ಚಿಕ್ಕಣ್ಣ ಅವರು ಸಂಚಾಲಕರಾಗಿ ಕಾರ್ಯನಿರ್ವಹಿಸಿದರು. ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ವಿ. ಇಂದ್ರಮ್ಮ ಉಪಸ್ಥಿತರಿದ್ದರು.

### ಲಕ್ಷ್ಮೇಶ್ವರ ದೃಶ್ಯ ವಲ್ಲರಿ

ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತಾಶ್ರಯದಲ್ಲಿ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ 'ಲಕ್ಷ್ಮೇಶ್ವರ ದೃಶ್ಯ ವಲ್ಲರಿ' ಚಿತ್ರಕಲಾ ಶಿಬಿರವನ್ನು ಆಯೋಜಿಸಲಾಗಿತ್ತು.



ಲಕ್ಷ್ಮೇಶ್ವರದಲ್ಲಿ 'ಲಕ್ಷ್ಮೇಶ್ವರ ದೃಶ್ಯ ವಲ್ಲರಿ' ಚಿತ್ರಕಲಾ ಶಿಬಿರಕ್ಕೆ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಚಿತ್ರ ಬಿಡಿಸುವ ಮೂಲಕ ಚಾಲನೆ ನೀಡಿದ ಸಂದರ್ಭ.




'ಲಕ್ಷ್ಮೇಶ್ವರ ದೃಶ್ಯ ವಲ್ಲರಿ' ಚಿತ್ರಕಲಾ ಶಿಬಿರಕ್ಕೆ ಭೇಟಿ ನೀಡಿದ ಪದ್ಮಶ್ರೀ ಪುರಸ್ಕೃತ ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ್‌ಕುಮಾರ್ ಅವರೊಟ್ಟಿಗೆ ಶಿಬಿರದ ಕಲಾವಿದರು.

೨೦೧೬ರ ಮಾರ್ಚ್ ೧೦ರಿಂದ ನಾಲ್ಕು ದಿನಗಳ ಕಾಲ ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದಲ್ಲಿ ಚಿತ್ರಕಲಾ ಶಿಬಿರ ಜರುಗಿತು. ಶಿಬಿರವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಪ್ರಾದೇಶಿಕ ನಿರ್ದೇಶಕರಾದ ಡಾ. ಎಸ್.ವಿ.ವೆಂಕಟೇಶಯ್ಯ ಅವರು ಉದ್ಘಾಟಿಸಿ ಕಲಾವಿದರಿಗೆ ಶುಭಕೋರಿದರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಲಾಶಿಬಿರದಲ್ಲಿ ಮಂಗಳೂರಿನ ಮೋಹನ್ ಪಿ. ಕುಮಾರ್, ಬೆಂಗಳೂರಿನ ವಿಜಯ ನಾಗವೇಕರ್, ಗದಗಿನ ಎನ್.ಬಿ.ಪರ್ವತಗೌಡ್ರ, ಹುಬ್ಬಳ್ಳಿಯ ಬಿ. ಜಯಂತ್, ಬೆಳಗಾವಿಯ ಮಹೇಶ್ ಪಿ. ಹೊನಲೆ, ಸಂಡೂರಿನ ಶ್ರೀನಾಥ್ ಕಾಳೆ, ಬೆಳಗಾವಿಯ ಶಿರೀಷ್ ದೇಶಪಾಂಡೆ, ದಾವಣಗೆರೆಯ ಹಜರತ್ ಅಲಿ, ಬಾಗಲಕೋಟೆಯ ಶಿವಣ್ಣ ಗೊಳಸಂಗಿ ಮತ್ತು ಬಸವನಬಾಗೇವಾಡಿಯ ಅಮಿತ್ ಜಿ. ಕಮ್ಮಾರ್ ಅವರು ಪಾಲ್ಗೊಂಡು ಕಲಾಕೃತಿಗಳನ್ನು ರಚಿಸಿಕೊಟ್ಟರು.

### ಕೆ.ಎಸ್.ನರಸಿಂಹಸ್ವಾಮಿ ಜನ್ಮಶತಮಾನೋತ್ಸವ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಸ್ತುವಾರಿಯಲ್ಲಿ ಮೈಸೂರು ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರ ಜನ್ಮಶತಮಾನೋತ್ಸವ ಸಮಾರಂಭವನ್ನು ಏರ್ಪಡಿಸಿತ್ತು.

ಮಾರ್ಚ್ ೧೧ರಿಂದ ಮೂರು ದಿನಗಳ ಕಾಲ ರಾಜಧಾನಿಯ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಈ ಜನ್ಮಶತಮಾನೋತ್ಸವದಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸಹಯೋಗದಲ್ಲಿ 'ಕಾವ್ಯಕುಂಚ' ಕಾರ್ಯಕ್ರಮವೂ ನಡೆಯಿತು.

ಕವಿತೆಯ ಓದಿಗೆ ಕುಂಚದಾರತಿ ಬೆಳಗುವ ಈ ವಿನೂತನ ಕಾರ್ಯಕ್ರಮದಲ್ಲಿ ಶ್ರೀಮತಿ ಪ್ರತಿಭಾ ನಂದಕುಮಾರ್ ಅವರು 'ರೈಲ್ವೆ ನಿಲ್ದಾಣದಲ್ಲಿ', ಜೆ.ಪಿ. ರಾಮಣ್ಣ ಅವರು 'ಗಡಿಯಾರದಂಗಡಿಯ ಮುಂದೆ', ಮಾಲತಿ ಶರ್ಮ ಅವರು 'ಬರಿಗೊಡಗಳಿಗೆ ಸಮಾಧಾನ' ಮತ್ತು ಟಿ.ಎನ್. ಸೀತಾರಾಂ ಅವರು 'ಹಿಂದಿನ ಸಾಲಿನ ಹುಡುಗರು' ಕಾವ್ಯವನ್ನು ವಾಚಿಸಿದರು. ಈ ಕವಿತೆಗಳ ಭಾವಲಹರಿಗೆ ತಕ್ಕಂತೆ ಕಲಾವಿದ ಡಾ. ಬಿ.ಕೆ.ಎಸ್.ವರ್ಮಾ ಅವರು ಬಣ್ಣ–ಗೆರೆಗಳ ಗರಿ ಮೂಡಿಸಿ ನೆರೆದವರ ಮನದಲ್ಲಿ ಅಭಿಮಾನದ ಚಿತ್ತಾರ ಅರಳಿಸಿದರು.

### ಗುರುನಾನಕ್ ಭವನದಲ್ಲಿ ಕಥಾನಕ ಚಿತ್ರಕಲಾ ಶಿಬಿರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ್‌ನ ಗುರುನಾನಕ್ ಪ್ರಬಂಧ ಕಮಿಟಿಯ ಸಹಯೋಗದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು ಬೀದರ್‌ನಲ್ಲಿ ಕಥಾನಕ ಚಿತ್ರಕಲಾ ಶಿಬಿರವನ್ನು ಏರ್ಪಡಿಸಿತ್ತು.



ಬೀದರ್‌ನ ಗುರುನಾನಕ್ ಭವನದಲ್ಲಿ ಹಮ್ಮಿಕೊಂಡಿದ್ದ 'ಕಥಾನಕ ಚಿತ್ರಕಲಾ ಶಿಬಿರ'ದ ಉದ್ಘಾಟನಾ ಸಂದರ್ಭದಲ್ಲಿ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ಬೀದರ್ ಜಿಲ್ಲಾಧಿಕಾರಿ ಅನುರಾಗ್ ತಿವಾರಿ, ಗುರುದ್ವಾರ ನಾನಕ್ ಝೀರಾದ ಅಧ್ಯಕ್ಷರಾದ ಸರ್ದಾರ ಬಲ್ಬೀರ್‌ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ಬೀದರ್‌ನ ಗುರುನಾನಕ್ ಝರಾ ಆವರಣದಲ್ಲಿ ಮಾರ್ಚ್ ೩೦ರಿಂದ ಏಪ್ರಿಲ್ ೨ರವರೆಗೆ ನಾಲ್ಕು ದಿನಗಳ ಕಾಲ ಕಥಾನಕ ಚಿತ್ರಕಲಾ ಶಿಬಿರ ಸಾಂಗೋಪಸಾಂಗವಾಗಿ ನಡೆಯಿತು.

ಬೀದರ್‌ನ ಜಿಲ್ಲಾಧಿಕಾರಿ ಅನುರಾಗ್ ತಿವಾರಿ ಅವರು ಶಿಬಿರಕ್ಕೆ ಚಾಲನೆ ನೀಡಿದರು. ಬೀದರ್‌ನಲ್ಲಿರುವ ಗುರುದ್ವಾರ ನಾನಕ್ ಝೀರಾದ ಅಧ್ಯಕ್ಷರಾದ ಸರ್ದಾರ್ ಬಲ್ಬೀರ್ ಸಿಂಗ್, ಉತ್ತರ ಕರ್ನಾಟಕ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಶಿವಶರಣಪ್ಪ ವಾಲಿ ಅವರು ಮುಖ್ಯ ಅತಿಥಿಗಳಾಗಿ



ಶಿಬಿರಕ್ಕೆ ಚಾಲನೆ ದೊರೆತ ಸಂದರ್ಭದಲ್ಲಿ ಅತಿಥಿ ಗಣ್ಯರಿಂದ ಚಿತ್ರ ರಚನೆ.

ಭಾಗವಹಿಸಿದ್ದರು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯ ಮಟ್ಟದ ಈ ಚಿತ್ರಕಲಾ ಶಿಬಿರದಲ್ಲಿ ಬೀದರ್‌ನ ಸಿ.ಬಿ.ಸೋಮಶೆಟ್ಟಿ, ವಿಕ್ಟೋರ್ ರಾಜ್, ದಾವಣಗೆರೆಯ ಸಿದ್ಧರಾಜು, ಹುಮನಾಬಾದ್‌ನ ಸುನೀಲ್ ಜಾಧವ್, ವಿಜಯಪುರದ ಪಿ.ಎಸ್.ಕಡೇಮನಿ, ಬಾಲಚಂದ್ರ ಬೆಕಿನಾಳ, ಬೆಂಗಳೂರಿನ ಯಶವಂತ್ ಹಿಬಾರೆ, ಸಂಜೀವಕುಲಕರ್ಣಿ, ಮಾಂತೇಶ್ ವೈ. ಕಾಶಿಕೋವಿ, ಚಿತ್ತಾಪುರದ ಉಮೇಶ್ ಬಾಬು, ಕಲ್ಬುರ್ಗಿಯ ಬಸವರಾಜ ಕಮಾಜಿ, ಕೆ.ಎಸ್.ಸರೋದೆ, ಬಾಗಲಕೋಟೆಯ ಚಂದ್ರಕಾಂತ ಸರೋದೆ, ಮಂಡ್ಯದ ಅಭಿಷೇಕ್, ಜಮಖಂಡಿಯ ಎಸ್.ಟಿ.ಬಗಲಿ, ಗದಗಿನ ವಿಜಯ ಕಿರೆಸೂರು, ಹುಬ್ಬಳ್ಳಿಯ ಪ್ರತಾಪ್ ಆರ್. ಬಹುರೂಪಿ, ಬೆಳಗಾವಿಯ ಸಂಗಮ್ ದೊಡ್ಡಮನಿ, ರಾಜು ಪಕಾಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಂ.ಎನ್.ನರಸಿಂಹಮೂರ್ತಿ, ತುಮಕೂರಿನ ಕೆಂಪರಾಜು, ರಂಗಸ್ವಾಮಿ, ಚಾಮರಾಜನಗರ ಜಿಲ್ಲೆಯ ಮಧುಸೂದನ್ ಅವರು ತಲಾ ಎರಡೆರಡು ಕಲಾಕೃತಿಗಳನ್ನು ರಚಿಸಿಕೊಟ್ಟರು.

ಏಪ್ರಿಲ್ ೨ರ ಗುರುವಾರ ಬೆಳಗ್ಗೆ ನಡೆದ ಕಥಾನಕ ಚಿತ್ರಕಲಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರದಲ್ಲಿ ರೂಪುಗೊಂಡ ಕಲಾಕೃತಿಗಳ ಪ್ರದರ್ಶನವನ್ನು ಬೀದರ್ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯದರ್ಶಿಗಳಾದ ಪವನ್‌ಕುಮಾರ್ ಮಾಲಪಾಟಿ ಅವರು ಉದ್ಘಾಟಿಸಿದರು. ಗುರು ನಾನಕ್ ಏಜುಕೇಷನಲ್ ಟ್ರಸ್ಟ್ ಅಧ್ಯಕ್ಷೆ ರೇಶ್ಮಾಕೌರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೀದರ್‌ನ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಡಾ. ಶಿವಪ್ರಕಾಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ವಿ.ಇಂದ್ರಮ್ಮ , ಸದಸ್ಯರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು. ಅಕಾಡೆಮಿಯ ಬೀದರ್ ಭಾಗದ ಸದಸ್ಯರಾದ ಬಿ.ಕೆ.ಬಡಿಗೇರ್ ಅವರು ಸಂಚಾಲಕರಾಗಿ ಶಿಬಿರದ ಯಶಸ್ಸಿಗೆ ಶ್ರಮಿಸಿದರು.

# ಕೇಂದ್ರ ಲಲಿತಕಲಾ ಅಕಾಡೆಮಿ ಬಹುಮಾನ ಪುರಸ್ಕೃತ ಕರ್ನಾಟಕದ 'ಸುವರ್ಣ ಕಲಾವಿದರು'

ಕರ್ನಾಟಕದ ಕಲಾವಲಯದಲ್ಲಿ ಅಚ್ಚಳಿಯದ ಹೆಜ್ಜೆಗುರುತುಗಳನ್ನು ಮೂಡಿಸಿದವರು ಅನೇಕ ಮಂದಿ. ತಮ್ಮ ಕಲಾನೈಪುಣ್ಯತೆ ಮತ್ತು ಅಪ್ರತಿಮ ಪ್ರತಿಭೆಯಿಂದ ಬಣ್ಣ-ಗೆರೆಗಳ ಮೂಲಕ ಕಲಾಸಕ್ತರ ಮನೆಗೆದ್ದವರು, ಮನ ಅರಳಿಸಿದವರು ನೂರಾರು ಮಂದಿ. ಆ ಪೈಕಿ ಪ್ರತಿಷ್ಠಿತ ಕೇಂದ್ರ ಲಲಿತಕಲಾ ಅಕಾಡೆಮಿಯ ಬಹುಮಾನಕ್ಕೆ ಭಾಜನರಾಗಿ ಕರುನಾಡಿನ ಕೀರ್ತಿ ಪತಾಕೆಯನ್ನು ಹಾರಿಸಿದವರು, ಕನ್ನಡದ ಡಿಂಡಿಮವನ್ನು ಬಾರಿಸಿದವರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದವರು ಹಲವು ಸಾಧಕರು. ಆ ಸಾಧಕರ ಪಟ್ಟಿಯನ್ನೊಮ್ಮೆ ಅವಲೋಕಿಸಿದರೆ ಕನ್ನಡನಾಡಿನ ಕಲಾಸಂಪತ್ತಿನ ದರ್ಶನವಾಗದೇ ಇರದು. ಆ ದರ್ಶನ ಓದುಗರ ಪಾಲಿಗೂ ಸಿಗಲೆಂಬ ಸದಾಶಯದ ಮೂರ್ತರೂಪವಿದು.

| ಕ್ರ.ಸಂ. | ಹೆಸರು | ವರ್ಷ |
|---|---|---|
| ೧. | ಶ್ರೀ ಕೆ.ಎಸ್. ಕುಲಕರ್ಣಿ | ೧೯೫೫ |
| ೨. | ಶ್ರೀ ಎ.ಎ. ಅಲ್‌ಮೆಲ್ಕರ್ | ೧೯೫೬ |
| ೩. | ಶ್ರೀ ಕೆ.ಕೆ. ಹೆಬ್ಬಾರ್ | ೧೯೫೮ |
| ೪. | ಶ್ರೀ ಎಸ್.ಜಿ. ವಾಸುದೇವ್ | ೧೯೬೭ |
| ೫. | ಶ್ರೀ ಬಾಲನ್ ನಂಬಿಯಾರ್ | ೧೯೮೧ |
| ೬. | ಶ್ರೀ ಯೂಸಫ್ ಅರಕ್ಕಲ್ | ೧೯೮೩ |
| ೭. | ಶ್ರೀ ವಿಜಯ ಸಿಂಧೂರ | ೧೯೮೩ |
| ೮. | ಶ್ರೀ ಕೆ.ಆರ್. ಸುಬ್ಬಣ್ಣ | ೧೯೮೪ |
| ೯. | ಶ್ರೀಮತಿ ಎನ್. ಪುಷ್ಪಮಾಲಾ | ೧೯೮೪ |
| ೧೦. | ಶ್ರೀ ಎಲ್.ಪಿ. ಅಂಚನ್ | ೧೯೮೫ |
| ೧೧. | ಶ್ರೀ ಕೆ.ಎಸ್. ರಾವ್ | ೧೯೮೫ |
| ೧೨. | ಶ್ರೀ ಆರ್. ಉಮೇಶ್ | ೧೯೮೭ |
| ೧೩. | ಶ್ರೀ ಎ. ಅಲ್ಫಾನ್ಸೊ | ೧೯೮೮ |
| ೧೪. | ಶ್ರೀ ವಿ.ಜಿ. ಅಂದಾನಿ | ೧೯೯೨ |

| | | |
|---|---|---|
| ೧೫. | ಶ್ರೀ ವೆಂಕಟಾಚಲಪತಿ | ೧೯೯೬ |
| ೧೬. | ಶ್ರೀ ವಿಜಯ ಬಾಗೋಡಿ | ೧೯೯೭ |
| ೧೭. | ಶ್ರೀ ಶೇಷಿರಾವ್ ಆರ್. ಬಿರಾದಾರ್ | ೧೯೯೭ |
| ೧೮. | ಶ್ರೀ ಜಿ.ಆರ್. ಈರಣ್ಣ | ೧೯೯೭ |
| ೧೯. | ಶ್ರೀ ಕೆ.ಎಸ್. ರಂಗನಾಥ್ | ೧೯೯೭ |
| ೨೦. | ಶ್ರೀ ಹೆಚ್.ಜಿ. ಅರುಣ್‌ಕುಮಾರ್ | ೧೯೯೮ |
| ೨೧. | ಶ್ರೀ ರವಿಕುಮಾರ್ ಕಾಶಿ | ೧೯೯೯ |
| ೨೨. | ಶ್ರೀ ಶಿವಾನಂದ ಬಸವಂತಪ್ಪ | ೨೦೧೪ |
| ೨೩. | ಶ್ರೀ ಬಿ. ದೇವರಾಜ | ೨೦೧೪ |
| ೨೪. | ಶ್ರೀ ಗಣಪತಿ ಪಿ. ಹೆಗಡೆ | ೨೦೧೪ |
| ೨೫. | ಶ್ರೀ ರಾಜೇಶ್ ಬಿ. ಆಚಾರ್ಯ | ೨೦೧೪ |
| ೨೬. | ಶ್ರೀ ರಾಮದಾಸ ಆಡ್ಯಂತಾಯ | ೨೦೧೪ |
| ೨೭. | ಶ್ರೀ ಗುರುಸಿದ್ಧಪ್ಪ | ೨೦೧೪ |
| ೨೮. | ಶ್ರೀ ವಿರೇಂದ್ರ ಶಾಹ | ೨೦೧೪ |
| ೨೯. | ಶ್ರೀ ಎಂ.ಬಿ. ಲೋಹಾರ್ | ೨೦೧೪ |
| ೩೦. | ಶ್ರೀ ಮಹಮ್ಮದ್ ಅಯಾಜುದ್ದಿನ್ ಪಟೇಲ್ | ೨೦೧೪ |
| ೩೧. | ಶ್ರೀನಿವಾಸ ರೆಡ್ಡಿ | ೨೦೧೪ |
| ೩೨. | ಶ್ರೀ ಸಂಜೀವ್ ರಾವ್ ಗುತ್ತಿ | ೨೦೧೪ |
| ೩೩. | ಶ್ರೀ ಮಂಜುನಾಥ್ ಕಲ್ಲೇದೇವರು | ೨೦೧೫ |



ಹಾವೇರಿ ಜಿಲ್ಲೆಯ ಶಿಗ್ಗಾಂವನಲ್ಲಿರುವ ಹಿರಿಯ ಕಲಾವಿದ
ಸೊಲಬಕ್ಕನವರ ಅವರನ್ನು ಅಕಾಡೆಮಿ ಅಧ್ಯಕ್ಷರಾದ
ಡಾ. ಎಂ.ಎಸ್.ಮೂರ್ತಿ ಅವರು ಭೇಟಿಯಾಗಿದ್ದ ಸಂದರ್ಭ.

# 1971–2015ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ 'ಸುವರ್ಣ ಕಲಾವಿದರು'



| ಕ್ರ. ಸಂ. | ಹೆಸರು | ಕ್ಷೇತ್ರ | ವರ್ಷ |
|---|---|---|---|
| ೧. | ಶ್ರೀ ಎನ್. ಹನುಮಯ್ಯ | ಚಿತ್ರಕಲೆ | ೧೯೭೧ |
| ೨. | ಶ್ರೀ ವೈ. ಸುಬ್ರಹ್ಮಣ್ಯರಾಜು | ಚಿತ್ರಕಲೆ | ೧೯೭೨ |
| ೩. | ಶ್ರೀ ಆರ್.ಎಸ್. ನಾಯ್ಡು | ಚಿತ್ರಕಲೆ | ೧೯೭೩ |
| ೪. | ಶ್ರೀ ಎಂ. ನಂಜುಂಡಯ್ಯ | ಚಿತ್ರಕಲೆ | ೧೯೭೪ |
| ೫. | ಶ್ರೀ ಪಿ.ಆರ್. ತಿಪ್ಪೇಸ್ವಾಮಿ | ಚಿತ್ರಕಲೆ | ೧೯೭೫ |
| ೬. | ಶ್ರೀ ಎಸ್.ಎಸ್. ಕುಕ್ಕೆ | ಚಿತ್ರಕಲೆ | ೧೯೭೬ |
| ೭. | ಶ್ರೀ ಮಧುಗಿರಿ ರಾಮು | ಚಿತ್ರಕಲೆ | ೧೯೮೧ |
| ೮. | ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ | ಚಿತ್ರಕಲೆ | ೧೯೮೨ |
| ೯. | ಡಾ. ಡಿ.ವಿ. ರಾವ್ | ಛಾಯಚಿತ್ರ | ೧೯೮೨ |
| ೧೦. | ಶ್ರೀ ಟಿ.ಎಸ್. ಸತ್ಯನ್ | ಛಾಯಚಿತ್ರ | ೧೯೮೨ |
| ೧೧. | ಶ್ರೀ ರುಮಾಲೆ ಚೆನ್ನಬಸವಯ್ಯ | ಚಿತ್ರಕಲೆ | ೧೯೮೩ |
| ೧೨. | ಶ್ರೀ ಎಸ್.ಎಂ. ಪಂಡಿತ್ | ಚಿತ್ರಕಲೆ | ೧೯೮೩ |
| ೧೩. | ಶ್ರೀ ಆರ್.ಕೆ. ಲಕ್ಷ್ಮಣ್ | ವ್ಯಂಗ್ಯಚಿತ್ರ | ೧೯೮೩ |
| ೧೪. | ಶ್ರೀ ಎಫ್.ಎಂ. ಸೂಫಿ | ಚಿತ್ರಕಲೆ | ೧೯೮೪ |
| ೧೫. | ಶ್ರೀ ಎಂ.ಎಸ್. ನಂಜುಂಡರಾವ್ | ಚಿತ್ರಕಲೆ | ೧೯೮೪ |
| ೧೬. | ಶ್ರೀ ಸಾಬಣ್ಣನವರ ನಾಗೇಶ್ ಭೀಮರಾವ್ | ಚಿತ್ರಕಲೆ | ೧೯೮೪ |
| ೧೭. | ಶ್ರೀ ಎಂ.ವೈ. ಘೋರ್ಪಡೆ | ಛಾಯಚಿತ್ರ | ೧೯೮೪ |
| ೧೮. | ಶ್ರೀ ಆರ್. ಮೂರ್ತಿ | ವ್ಯಂಗ್ಯಚಿತ್ರ | ೧೯೮೪ |
| ೧೯. | ಡಾ. ಕೆ.ಕೆ. ಹೆಬ್ಬಾರ್ | ಚಿತ್ರಕಲೆ | ೧೯೮೫ |
| ೨೦. | ಶ್ರೀ ಎಸ್.ವಿ. ನಾಯಕ | ಚಿತ್ರಕಲೆ | ೧೯೮೫ |
| ೨೧. | ಶ್ರೀ ಜಿ.ವಿ.ಕೆ. ಶಾಸ್ತ್ರಿ | ಕಲಾವಿಮರ್ಶೆ | ೧೯೮೫ |
| ೨೨. | ಶ್ರೀ ಆರ್. ಎಂ. ಹಡಪದ | ಚಿತ್ರಕಲೆ | ೧೯೮೬ |
| ೨೩. | ಶ್ರೀ ಎನ್. ನರಸಿಂಹಾಚಾರ್ | ಚಿತ್ರಕಲೆ | ೧೯೮೬ |
| ೨೪. | ಕುಮಾರಿ ಎನ್. ಪುಷ್ಪಮಾಲಾ | ಚಿತ್ರಕಲೆ | ೧೯೮೬ |
| ೨೫. | ಶ್ರೀ ಎಸ್.ಎನ್. ಚಂದ್ರಶೇಖರ್ | ಕಲಾವಿಮರ್ಶೆ | ೧೯೮೬ |
| ೨೬. | ಶ್ರೀ ಇ. ಹನುಮಂತರಾವ್ | ಛಾಯಾಚಿತ್ರ | ೧೯೮೬ |
| ೨೭. | ಶ್ರೀ ಎಲ್.ಪಿ. ಅಂಚನ್ | ಚಿತ್ರಕಲೆ | ೧೯೮೮ |
| ೨೮. | ಶ್ರೀ ಎಂ.ಎ. ಚೆಟ್ಟಿ | ಚಿತ್ರಕಲೆ | ೧೯೮೮ |

| | | |
|---|---|---|
| ೨೯. ಶ್ರೀ ಎಂ.ಟಿ.ವಿ. ಆಚಾರ್ಯ | ಚಿತ್ರಕಲೆ | ೧೯೮೯ |
| ೩೦. ಶ್ರೀ ಆರ್.ಜಿ. ರಾಯಕರ್ | ಚಿತ್ರಕಲೆ | ೧೯೮೯ |
| ೩೧. ಶ್ರೀ ಅಲ್ಲಮಪ್ರಭು | ಛಾಯಾಚಿತ್ರ | ೧೯೮೯ |
| ೩೨. ಶ್ರೀ ಎಂ.ಎಸ್. ನಟರಾಜನ್ | ಕಲಾಸೇವೆ | ೧೯೯೦ |
| ೩೩. ಶ್ರೀ ವಿ. ಬಾಲು | ಚಿತ್ರಕಲೆ | ೧೯೯೦ |
| ೩೪. ಶ್ರೀ ಕೃಷ್ಣ ಶ್ರೀನಿವಾಸ ಪೋತೇದಾರ್ | ಚಿತ್ರಕಲೆ | ೧೯೯೦ |
| ೩೫. ಶ್ರೀ ಕೆ. ರಾಮರಾಯ ಆಚಾರ್ಯ | ಶಿಲ್ಪಕಲೆ | ೧೯೯೧ |
| ೩೬. ಶ್ರೀ ವಿ.ಜಿ. ಸಿಂಧೂರ | ಚಿತ್ರಕಲೆ | ೧೯೯೧ |
| ೩೭. ಶ್ರೀ ಎಸ್.ವಿ. ಪದ್ಮನಾಭಾಚಾರ್ಯ | ಚಿತ್ರಕಲೆ | ೧೯೯೧ |
| ೩೮. ಶ್ರೀ ಮಾಯಚಾರ್ಯ | ಚಿತ್ರಕಲೆ | ೧೯೯೧ |
| ೩೯. ಶ್ರೀ ಷಣ್ಮುಖಪ್ಪ ಕಾಚಪ್ಪ ಯರಕದ | ಶಿಲ್ಪಕಲೆ | ೧೯೯೧ |
| ೪೦. ಶ್ರೀ ಪೀಟರ್ ಎ. ಲೂಯಿಸ್ | ಚಿತ್ರಕಲೆ | ೧೯೯೨ |
| ೪೧. ಶ್ರೀ ಜಿ.ಎಸ್. ಶೆಣೈ | ಚಿತ್ರಕಲೆ | ೧೯೯೨ |
| ೪೨. ಶ್ರೀ ಟಿ.ಎಲ್. ಬುರಾಣಪುರ | ಚಿತ್ರಕಲೆ | ೧೯೯೨ |
| ೪೩. ಶ್ರೀ ಎಂ.ಎಸ್. ಚಂದ್ರಶೇಖರ್ | ಚಿತ್ರಕಲೆ | ೧೯೯೨ |
| ೪೪. ಶ್ರೀ ವಿ.ಜಿ. ಅಂದಾನಿ | ಚಿತ್ರಕಲೆ | ೧೯೯೨ |
| ೪೫. ಶ್ರೀ ರಾಜೇಂದ್ರ ಅಷ್ಟಗಿ | ಚಿತ್ರಕಲೆ | ೧೯೯೨ |
| ೪೬. ಶ್ರೀ ಎಸ್.ಜಿ. ವಾಸುದೇವ್ | ಚಿತ್ರಕಲೆ | ೧೯೯೨ |
| ೪೭. ಶ್ರೀ ಡಿ.ವಿ. ಹಾಲಭಾವಿ | ಚಿತ್ರಕಲೆ | ೧೯೯೪ |
| ೪೮. ಶ್ರೀ ಬಿ. ಶಂಕರೇಗೌಡ ಬೆಟ್ಟದೂರು | ಚಿತ್ರಕಲೆ | ೧೯೯೫ |
| ೪೯. ಶ್ರೀ ಜೆ.ಎಸ್. ಖಂಡೇರಾವ್ | ಚಿತ್ರಕಲೆ | ೧೯೯೫ |
| ೫೦. ಶ್ರೀ ಬಿ.ಕೆ. ಹುಬ್ಳಿ | ಚಿತ್ರಕಲೆ | ೧೯೯೬ |
| ೫೧. ಶ್ರೀ ಸಿ. ರಾಜಗೋಪಾಲ್ | ಛಾಯಾಚಿತ್ರ | ೧೯೯೬ |
| ೫೨. ಶ್ರೀ ಟಿ.ಎಲ್. ರಾಮಸ್ವಾಮಿ | ಛಾಯಾಚಿತ್ರ | ೧೯೯೬ |
| ೫೩. ಶ್ರೀ ಬೂದಿರಾಮಭಟ್ಟ | ಚಿತ್ರಕಲೆ | ೧೯೯೭ |
| ೫೪. ಶ್ರೀ ಯೂಸಫ್ ಅರಕ್ಕಲ್ | ಚಿತ್ರಕಲೆ | ೧೯೯೮ |
| ೫೫. ಶ್ರೀ ಎಂ.ಜೆ. ಶುದ್ದೋದನ | ಚಿತ್ರಕಲೆ | ೧೯೯೮ |
| ೫೬. ಶ್ರೀ ಸಿ. ಚಂದ್ರಶೇಖರ | ಚಿತ್ರಕಲೆ | ೧೯೯೯ |
| ೫೭. ಶ್ರೀಮತಿ ಸುಭಾಷಿಣಿ ದೇವಿ | ಚಿತ್ರಕಲೆ | ೨೦೦೦ |
| ೫೮. ಶ್ರೀಮತಿ ಶಾರದ ರಾಜು | ಚಿತ್ರಕಲೆ | ೨೦೦೦ |
| ೫೯. ಶ್ರೀ ಸಿ.ಪಿ. ನಾಗೌಡ | ಚಿತ್ರಕಲೆ | ೨೦೦೧ |
| ೬೦. ಶ್ರೀ ಬಿ.ಕೆ.ಎಸ್. ವರ್ಮಾ | ಚಿತ್ರಕಲೆ | ೨೦೦೧ |
| ೬೧. ಶ್ರೀ ಕೆ.ಟಿ. ಶಿವಪ್ರಸಾದ್ | ಚಿತ್ರಕಲೆ | ೨೦೦೨ |
| ೬೨. ಶ್ರೀ ಶ್ರೀಕಾಂತಶೆಟ್ಟಿ | ಚಿತ್ರಕಲೆ | ೨೦೦೨ |
| ೬೩. ಶ್ರೀ ಜಿ.ವೈ. ಹುಬ್ಳೀಕರ್ | ಚಿತ್ರಕಲೆ | ೨೦೦೨ |
| ೬೪. ಶ್ರೀ ಎಂ.ಬಿ. ಪಾಟೀಲ್ | ಚಿತ್ರಕಲೆ | ೨೦೦೩ |
| ೬೫. ಶ್ರೀ ಚಿ.ಸು. ಕೃಷ್ಣಸೆಟ್ಟಿ | ಕಲಾವಿಮರ್ಶೆ | ೨೦೦೩ |

| | | |
|---|---|---|
| ೩೬. ಶ್ರೀ ವಿ.ಟಿ. ಕಾಳೆ | ಚಿತ್ರಕಲೆ | ೨೦೦೪ |
| ೩೭. ಶ್ರೀ ಹೀರಾಲಾಲ್ ಮಲ್ಕಾರಿ | ಚಿತ್ರಕಲೆ | ೨೦೦೪ |
| ೩೮. ಶ್ರೀ ಯು. ಭಾಸ್ಕರರಾವ್ | ಚಿತ್ರಕಲೆ | ೨೦೦೪ |
| ೩೯. ಶ್ರೀ ಮುಲ್ಕಿ ಚಂದ್ರಶೇಖರ ಸುವರ್ಣ | ಚಿತ್ರಕಲೆ | ೨೦೦೫ |
| ೪೦. ಶ್ರೀ ಖಂಡೋಬಾ | ಚಿತ್ರಕಲೆ | ೨೦೦೫ |
| ೪೧. ಶ್ರೀಮತಿ ರೇಖಾರಾವ್ | ಚಿತ್ರಕಲೆ | ೨೦೦೬ |
| ೪೨. ಶ್ರೀ ಜೆ.ಎಂ.ಎಸ್. ಮಣಿ | ಚಿತ್ರಕಲೆ | ೨೦೦೬ |
| ೪೩. ಶ್ರೀ ಎಂ.ಆರ್. ಬಾಳೇಕಾಯಿ | ಚಿತ್ರಕಲೆ | ೨೦೦೭ |
| ೪೪. ಪ್ರೊ. ವಿ.ಎಂ. ಸೊಲಾಪುರ್‌ಕರ್ | ಚಿತ್ರಕಲೆ | ೨೦೦೮ |
| ೪೫. ಶ್ರೀ ಕೆ. ಚಂದ್ರನಾಥ ಅಚಾರ್ಯ | ಚಿತ್ರಕಲೆ | ೨೦೦೮ |
| ೪೬. ಶ್ರೀ ಯಶವಂತ ಹಿಬಾರೆ | ಚಿತ್ರಕಲೆ | ೨೦೦೮ |
| ೪೭. ಶ್ರೀ ಬಿ.ಜಿ. ಮಹಮದ್ | ಚಿತ್ರಕಲೆ | ೨೦೦೮ |
| ೪೮. ಶ್ರೀ ವಿ.ಬಿ. ಹಿರೇಗೌಡರ್ | ಚಿತ್ರಕಲೆ | ೨೦೧೦ |
| ೪೯. ಡಾ. ಎಂ.ಎಸ್. ಮೂರ್ತಿ | ಚಿತ್ರಕಲೆ | ೨೦೧೦ |
| ೫೦. ಶ್ರೀ ಎ.ಎಸ್. ಪಾಟೀಲ | ಚಿತ್ರಕಲೆ | ೨೦೧೦ |
| ೫೧. ಶ್ರೀ ಜಂಬುಕೇಶ್ವರ (ಛಾಯಾಚಿತ್ರಗಾರ) | ಚಿತ್ರಕಲೆ | ೨೦೧೦ |
| ೫೨. ಡಾ. ಟಿ. ಅನಿಲ್ ಕುಮಾರ್ | ಚಿತ್ರಕಲೆ | ೨೦೧೧ |
| ೫೩. ಶ್ರೀ ಪ.ಸ. ಕುಮಾರ್ | ಚಿತ್ರಕಲೆ | ೨೦೧೨ |
| ೫೪. ಶ್ರೀ ಕೆ.ಎನ್. ರಾಮಚಂದ್ರನ್ | ಚಿತ್ರಕಲೆ | ೨೦೧೨ |
| ೫೫. ಶ್ರೀ ಅಲ್ಲಿಸಾಬ ಸೈ ನದಾಫ | ಚಿತ್ರಕಲೆ | ೨೦೧೩ |
| ೫೬. ಶ್ರೀ ವಿಜಯ ಹಾಗರಗುಂಡಗಿ | ಚಿತ್ರಕಲೆ | ೨೦೧೩ |
| ೫೭. ಶ್ರೀ ಖಾಸಿಮ್ ಕನಸಾವಿ | ಚಿತ್ರಕಲೆ | ೨೦೧೪ |
| ೫೮. ಶ್ರೀಮತಿ ಲಕ್ಷ್ಮೀ ರಾಮಪ್ಪ | ಚಿತ್ರಕಲೆ | ೨೦೧೪ |
| ೫೯. ಶ್ರೀಮತಿ ಎನ್.ಜೆ. ಕಮಲಾಕ್ಷಿ | ಚಿತ್ರಕಲೆ | ೨೦೧೫ |
| ೬೦. ಶ್ರೀ ಪಿ.ಎಸ್. ಕಡೀಮನಿ | ಚಿತ್ರಕಲೆ | ೨೦೧೫ |



ಮುಂಬೈನಲ್ಲಿ ನಡೆದ ಕಲಾಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ
ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಗಣ್ಯರೊಂದಿಗೆ

## ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ಪಡೆದ 'ಸುವರ್ಣ ಕಲಾವಿದರು'

| | | |
|---|---|---|
| • 1966 | 1. | Shri M.Veerappa |
| | 2. | Shri M.V.Minajagi |
| | 3. | Shri S.S.Alandhakar |
| | 4. | Shri S.N.Sthapathi |
| • 1967 | 5. | Shri G.Venkatachalam |
| | 6. | Shri M.A.Chetty |
| | 7. | Shri B.Basaviaha |
| | 8. | Shri S.N.Swamy |
| • 1968 | 9. | Shri F.B.Yalavatti |
| | 10. | Shri D.V.Halabhavi |
| | 11. | Shri A.C.H.Acharya |
| • 1969 | 12. | Shri A.N.Subbarayaru |
| | 13. | Shri S.Nanjundaswamy |
| | 14. | Shri G.S.Dandavathimata |
| | 15. | Shri Ranjala GopalaKrishna Shenoy |
| • 1970 | 16. | Shri S.G.Tankasale |
| | 17. | Shri T.P.Akki |
| | 18. | Shri S.R.Swamy |
| • 1971 | 19. | Shri M.J.Shuddodana |
| | 20. | Shri K.A.Chetty |
| | 21. | Shri S.R.Iyengar |
| • 1972 | 22. | Shri Y.Nagaraju |
| | 23. | Shri Rumale Channabasavaiah |
| | 24. | Shri K.B.Kulkarni |
| | 25. | Shri Raghavendra B.Chouhan |
| • 1973 | 26. | Shri H.S.Inamati |
| | 27. | Shri R.S.Naidu |
| | 28. | Shri Y.Subramanya Raju |
| | 29. | Shri Narayana Kulkarni |

| | | |
|---|---|---|
| • 1980 | 30. | Shri N.Hanumaiah |
| | 31. | Shri N.S.SubbuKrishna |
| | 32. | Shri M.T.V.Acharya |
| | 33. | Shri M.S.Nanjundrao |
| | 34. | Shri V.C.Malagathi |
| | 35. | Shri B.G.Mohammad |
| | 36. | Shri S.Narasimhachar |
| | | |
| • 1981 | 37. | Shri B.P.Bayiri |
| | 38. | Shri P.R.Thippeswamy |
| | 39. | Shri S.S.Kukke |
| | 40. | Shri C.N.Patil |
| | 41. | Shri R.G.Raykar |
| | | |
| • 1982 | 42. | Shri M.S.Chandrashekar |
| | 43. | Shri M.E.Guru |
| | 44. | Shri F.M.Soophie |
| | 45. | Shri S.M.Pandit |
| | 46. | Shri S.Shettar |
| | 47. | Shri R.M.Hadapad |
| | | |
| • 1983 | 48. | Shri S.B.Chinnannavara |
| | 49. | Shri M.H.Ramu |
| | | |
| • 1984 | 50. | Shri Dhananjaya Shilpi |
| | 51. | Shri G.Basavanna Shilpi |
| | 52. | Shri B.H.Ramachandra |
| | 53. | Shri Sagaradatta Patil |
| | 54. | Shri K.K.Hebbar |
| | | |
| • 1985 | 55. | Shri V.T.Kale |
| | 56. | Shri Krishnakshatri |
| | 57. | Shri N.K.Mruthyunjayacharya |
| | 58. | Shri Vijaya Sindhura |
| | 59. | Smt Subashinidevi |
| | | |
| • 1986 | 60. | Shri S.Kalappa |
| | 61. | Shri Kalappa Manappa Kammar |
| | 62. | Shri Narayanappa Chitragar |
| | 63. | Shri M.B.Patil |
| | 64. | Shri B.V.K.Shastri |

| | | |
|---|---|---|
| • 1987 | 65. | Shri S.N.Chandrashekar |
| | 66. | Shri V.K.Patil |
| | 67. | Shri S.G.Vasudev |
| | | |
| • 1988 | 68. | Shri R.B.Kumbara |
| | 69. | Shri J.S.Khanderao |
| | 70. | Shri G.D.Mayacharya Shilpi |
| | 71. | Shri S.S.Munoli |
| | 72. | Shri Shrikanth C.Shetty |
| | | |
| • 1989 | 73. | Shri Panchaksharaiah Shivamurthaiah Hiremata |
| | 74. | Shri Yusaf Arakkal |
| | 75. | Shri B.N.Ramachandrappa |
| | 76. | Shri K.S.Rao |
| | 77s. | Shri Y.H.Suguru |
| | | |
| • 1990 | 78. | Shri C.Parameshwarachar |
| | 79. | Shri Peter A.Louis |
| | 80. | Shri B.V.Ramamurthy |
| | 81. | Shri G.S.Shenoy |
| | 82. | Shri Somashekar M. Sali |
| | | |
| • 1991 | 83. | Shri Nagamangala Puttacharya |
| | 84. | Shri A.S.Patil |
| | 85. | Shri Basavaraj Halijola |
| | 86. | Shri Venkobappa Krishnappa Chitragar |
| | 87. | Shri Srinivasacharya |
| | 88. | Shri V.B.Hiregoudar |
| | | |
| • 1992 | 89. | Shri Devalakunda Vadiraj |
| | 90. | Shri Nagalingacharya Shankarappacharya Shilpi |
| | 91. | Shri K.V.Seetharaman |
| | 92. | Shri B.K.Hubli |
| | 93. | Shri G.Y.Hublikar |
| | | |
| • 1993 | 94. | Shri L.P.Anchan |
| | 95. | Smt Kamalakshi M.J |
| | 96. | Shri M.Ramanarasaiah |

| | | |
|---|---|---|
| | 97. | Shri Vittal R.Shetty |
| | 98. | Shri Shankargowda Bettadoor |
| | | |
| • 1994 | 99. | Shri V.G.Andani |
| | 100. | Shri M.Y.Ghorpade |
| | 101. | Shri Jayavantha Sangappa Munoli |
| | 102. | Shri C.RajGopal |
| | 103. | Shri S.K.Ramachandrarao |
| | 104. | Shri K.ShamaRay Acharya |
| | 105. | Shri R.Seetharam |
| • 1995 | 106. | Shri N.B.Neelakantacharya |
| | 107. | Shri T.N.A.Perumal |
| | 108. | Shri Mahaveer Rayappa Balikai |
| | 109. | Shri T.Veerupakshappa |
| | 110. | Dr.B.K.Hiremath |
| | | |
| • 1996 | 111. | Shri B.Kondacharya |
| | 112. | Dr.Dodderi Venkatagirirao |
| | 113. | Shri P.S.Punchinthaya |
| | 114. | Shri M.B.Basavaraju |
| | 115. | Shri U.BhaskarRao |
| | | |
| • 1997 | 116. | Shri Kalidasa Pathar |
| | 117. | Smt S.Dhanalakshmi |
| | 118. | Shri Vishnudas Ramdas |
| | 119. | Shri K.S. Sherigar |
| | 120. | Shri E.Hanumanthrao |
| | | |
| • 1998 | 121. | Shri Arya Acharya |
| | 122. | Shri K.Chandranath Acharya |
| | 123. | Shri Basavantharao Kadoon |
| | 124. | Shri M.G.Vachedamata |
| | 125. | Shri Shankara Patil |
| | | |
| • 1999 | 126. | Shri C.Chandrashekar |
| | 127. | Shri N.C.Desai |
| | 128. | Shri Basavaraj R.Uppina |
| | 129. | Shri K.Lakshman Bhat |
| | 130. | Shri K.V.Subramanya |

| | | |
|---|---|---|
| • 2000 | 131. | Smt Pushpadravid |
| | 132. | Shri Manohar D. Kadlikoppa |
| | 133. | Shri M.B.Lohar |
| | 134. | Shri Ramdas Adyanthaya |
| | 135. | Shri K.G.Somashekar |
| | | |
| • 2001 | 136. | Shri Raghothama Putti |
| | 137. | Shri H.N.Kulkarni |
| | 138. | Smt Girija Yadav |
| | 139. | Shri Jasurawal |
| | 140. | Shri Mahadev Kavishetty |
| | 141. | Shri Dharbe Krishnanda Chouta |
| | | |
| • 2002 | 142. | Shri P.S.Hiremath |
| | 143. | Shri C.S.Krishna Setty |
| | 144. | Shri P.Rajashekar |
| | 145. | Shri Purushotham Karanth |
| | 146. | Shri Narayan Bhosawale |
| | 147. | Shri L.Revana Siddaiah |
| | | |
| • 2003 | 148. | Shri C.B.Kachapura |
| | 149. | Shri S.S.Simpi |
| | 150. | Shri G.S.N.Simha |
| | 151. | Smt Lalitha Hoysala |
| | 152. | Dr.A.L.Narasimhan |
| | 153. | Shri K.R.Krishnaswamy |
| | | |
| • 2004 | 154. | Dr. S.C.Patil |
| | 155. | Shri N.Marishamachar |
| | 156. | Shri K.S.Sarode |
| | | |
| • 2005 | 157. | Shri Dayananda Achyutha Shetty |
| | 158. | Shri P.S.Kumar |
| | 159. | Smt Susheela Parvathaiah |
| | | |
| • 2006 | 160. | Shri T.B.Solabakkanavar |
| | 161. | Shri K.T.Shivaprasad |
| | 162. | Shri H.N.Suresh |

| | | |
|---|---|---|
| • 2007 | 163. | Shri S.Appasaheba Kadapurakara |
| | 164. | Shri Mallikarjuna Jadhav |
| | 165. | Shri J.M.S. Mani |
| | | |
| • 2008 | 166. | Shri Eshwarappa Bheemappa Hameedkhan |
| | 167. | Shri K.N.Ramachandran |
| | 168. | Shri L.Shivalingappa |
| | | |
| • 2009 | 169. | Shri Suresh D. Halabhavi |
| | 170. | Shri P.N.Ramachandran |
| | 171. | Shri Basavaraj L. Jhane |
| | | |
| • 2010 | 172. | Shri Heeralal Malkari |
| | 173. | Smt Sudha Venkatesh |
| | 174. | Shri P.S.Kademani |
| | | |
| • 2011 | 175. | Shri S.Krishnappa |
| | 176. | Shri U.Ramesh Rao |
| | 177. | Shri Ashok T. Akki |
| | | |
| • 2012 | 178. | Shri D.M.Badiger |
| | 179. | Shri P.B.Harasur |
| | 180. | Shri M.I.Dange |
| | | |
| • 2013- | 181. | Shri ChandraKanth Kusanuru |
| 2014 | 182. | Dr.B.K.S.Verma |
| | 183. | Smt Lakshmi Ramappa |
| | 184. | Shri Chandrashekar Somashetty |
| | 185. | Shri Basawaraj Musavalgi |
| | 186. | Shri K.Gangadhar |
| | | |
| • 2014- | 187. | Shri L.S.N.Achar |
| 2015 | 188. | Shri Vijaynath Shenoy |
| | 189. | Shri Kashappa Veerappa Kungadola |

# ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಅರ್ಜಿ ಸಲ್ಲಿಕೆ ವಿಧಾನ

ಕರ್ನಾಟಕ ಲಲಿತಕಲಾ ಅಕಾಡೆಮಿಯ ರಾಜ್ಯದ ಕಲಾವಿದರಿಗೆ ರಾಜ್ಯದ ಒಳಗೆ ಮತ್ತು ಹೊರ ರಾಜ್ಯಗಳಲ್ಲಿ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನ ಏರ್ಪಡಿಸಲು ಧನಸಹಾಯ ನೀಡುತ್ತಿದೆ. ಅಂತೆಯೇ 2016ನೇ ಸಾಲಿನ ಏಕವ್ಯಕ್ತಿ ಮತ್ತು ಸಮೂಹ ಕಲಾಪ್ರದರ್ಶನಕ್ಕೆ ಧನಸಹಾಯ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ. ಈ ಪ್ರದರ್ಶನದಲ್ಲಿ ಭಾಗವಹಿಸಲಿಚ್ಚಿಸುವ ಕಲಾವಿದರು ತಾವು ರಚಿಸಿದ ಕಲಾಕೃತಿಗಳ 5 7 ಅಂಗುಲ ಅಳತೆಯ ಛಾಯಾಚಿತ್ರಗಳನ್ನು ಕಳುಹಿಸಬೇಕಾಗಿದ್ದು ಅವು ಕಳೆದ 2 ವರ್ಷಗಳಿಂದೀಚೆಗೆ ರಚಿಸಿದ ಕಲಾಕೃತಿಗಳಾಗಿರಬೇಕು. ಯಾವುದೇ ಕಲಾಪ್ರದರ್ಶನದಲ್ಲಿ ಪ್ರದರ್ಶನಗೊಂಡಿರಬಾರದು. ಈ ಧನಸಹಾಯಕ್ಕೆ ಆಸಕ್ತ ಕಲಾವಿದರು ತಮ್ಮ ಕನಿಷ್ಠ ಐದು ಕಲಾಕೃತಿಗಳ ಛಾಯಾಚಿತ್ರಗಳು ಮತ್ತು ಕಲಾವಿದರ ಭಾವಚಿತ್ರ, ಪರಿಚಯ ಪತ್ರದೊಂದಿಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ಅರ್ಜಿಗಳನ್ನು ಅಕಾಡೆಮಿಯ ಕಛೇರಿಗೆ (ಅಂಚೆ ಮೂಲಕ ಅಥವಾ ಖುದ್ದಾಗಿ) ತಲುಪಿಸಬಹುದು. ಈ ಕುರಿತ ಅರ್ಜಿಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಿ ತೀರ್ಮಾನಕ್ಕೈಗೊಳ್ಳಬಹುದು. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮ.

| | |
|---|---|
| ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ 10 ಜನರಿಗೆ (ರಾಜ್ಯದಲ್ಲಿ) | 10,000/- |
| ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ 10 ಜನರಿಗೆ (ಹೊರರಾಜ್ಯದಲ್ಲಿ) | 15,000/- |
| ಸಮೂಹ ಚಿತ್ರ ಪ್ರದರ್ಶನ 7 ತಂಡಕ್ಕೆ (ರಾಜ್ಯದಲ್ಲಿ) | 15,000/- |
| ಸಮೂಹ ಚಿತ್ರ ಪ್ರದರ್ಶನ 5 ತಂಡಕ್ಕೆ (ಹೊರ ರಾಜ್ಯದಲ್ಲಿ) | 20,000/- |

ಅರ್ಜಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಛೇರಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-2, ಇಲ್ಲಿ ಖುದ್ದಾಗಿ ಅಥವಾ ರೂ. 5/-ಗಳ ಅಂಚೆ ಚೀಟಿ ಲಗತ್ತಿಸಿದ ಸ್ವ-ವಿಳಾಸವುಳ್ಳ ಮತ್ತು ದೂರವಾಣಿಯ ಸಂಖ್ಯೆಯುಳ್ಳ ಕಳುಹಿಸಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ : 080-22480297ನ್ನು ಅಥವಾ Facebook, email : kla.karnataka@gmail.com.

# 2016–17ನೇ ಸಾಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಧನಸಹಾಯಕ್ಕಾಗಿ ಅರ್ಜಿಸಲ್ಲಿಸಲು 'ದೃಢೀಕರಣ ಪತ್ರ' ಪಡೆಯಲು ರೂಪಿಸಿರುವ ನಿಯಮಗಳು

1. ಚಿತ್ರಕಲಾ ಕ್ಷೇತ್ರದಲ್ಲಿ ಪದವಿ ಪಡೆದಿರಬೇಕು.
2. ಪದವಿ ನಂತರ ಕನಿಷ್ಠ 5 ವರ್ಷ ಚಿತ್ರಕಲಾ ಸೇವೆ ಸಲ್ಲಿಸಿರಬೇಕು.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಮ್ಮೆ ಧನ ಸಹಾಯ ಪಡೆದವರು, ಮತ್ತೆ ಅರ್ಜಿಸಲ್ಲಿಸಲು ಮೂರು ವರ್ಷಗಳ ಅಂತರವಿರಬೇಕು.
4. ರಾಜ್ಯ/ರಾಷ್ಟ್ರಮಟ್ಟ/ಅಂತರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರಗಳು/ ಪ್ರದರ್ಶನಗಳಲ್ಲಿ ಭಾಗವಹಿಸಿರಬೇಕು.
5. ಕರ್ನಾಟಕ ಲಲಿತಕಲಾ ಅಕಾಡೆಮಿಯ ವಾರ್ಷಿಕ ಕಲಾ ಪ್ರದರ್ಶನಗಳು, ಬಹುಮಾನ, ಪ್ರಶಸ್ತಿ ಅಥವಾ 3 ವರ್ಷಗಳ ವಾರ್ಷಿಕ ಪ್ರದರ್ಶನಗಳಲ್ಲಿ ಆಯ್ಕೆಯಾಗಿರಬೇಕು.
6. ಚಿತ್ರಕಲಾ ಕ್ಷೇತ್ರದಲ್ಲಿನ ವೃತ್ತಿಪರ ಕಲಾವಿದರಿಗೆ ಮೊದಲ ಆದ್ಯತೆ.
7. ಈ ಮೇಲಿನ ನಿಯಮ ಹೊರತುಪಡಿಸಿ, ಹವ್ಯಾಸಿ ಕಲಾವಿದರು, ಪೂರ್ಣಾವಧಿ ಚಿತ್ರಕಲೆಯನ್ನು ಅಭ್ಯಸಿಸುವ ಕಲಾವಿದರು ಕನಿಷ್ಠ ಎರಡು ದಶಕದಿಂದ ಕಲಾ ರಚನೆಯಲ್ಲಿ ತೊಡಗಿಸಿ ಕರ್ನಾಟಕ ಕಲಾ ಸಮುದಾಯಕ್ಕೆ ಸಕ್ರಿಯವಾಗಿ ತೊಡಗಿಸಿಕೊಂಡ ಕಲಾವಿದರು ಅರ್ಜಿ ಸಲ್ಲಿಸಬಹುದು.
8. ಅಕಾಡೆಮಿಯ ಹಾಲಿ ಅಧ್ಯಕ್ಷರು, ಸದಸ್ಯರು ಅರ್ಜಿ ಸಲ್ಲಿಸುವಂತಿಲ್ಲ.
9. ಸರ್ಕಾರಿ/ಅನುದಾನಿತ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಚಿತ್ರಕಲಾ ಶಿಕ್ಷಕರು / ಕಲಾಶಾಲೆಗಳಲ್ಲಿ ಸಏವೆ ಸಲ್ಲಿಸುತ್ತಿರುವ ಕಲಾವಿದರನ್ನು ಪರಿಗಣಿಸಲಾಗುವುದಿಲ್ಲ.
10. ಚಿತ್ರಕಲಾ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
11. ಅರ್ಹ ಕಲಾವಿದರು ಸ್ವ-ವಿವರ, ಭಾವಚಿತ್ರ, 5 ಕಲಾಕೃತಿಗಳ ಪ್ರತಿ ಇತ್ಯಾದಿಗಳೊಂದಿಗೆ ಅರ್ಜಿ ಸಲ್ಲಿಸಬಹುದು.
12. ಅಪೂರ್ಣ ಅರ್ಜಿ, ದಿನಾಂಕ ಮೀರಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

**ವಿ.ಸೂ** : ನಿರ್ದೇಶನಾಲಯ, ಸೂಚನೆ ಮೇರೆಗೆ ಕ್ರಸಂ.ಡಿ.ಕೆಸಿ 33013/66/2016, ದಿನಾಂಕ: 14.6.2016ರನ್ವಯ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಮೇಲ್ಕಂಡ ನಿಯಮದ ಪ್ರಕಾರ ದಿನಾಂಕ: 16.7.2016ರಿಂದ ಅಕಾಡೆಮಿಯ ನಿಯಮಾವಳಿಯಂತೆ ದೃಢೀಕರಣ ಪತ್ರ ನೀಡಲಾಯಿತು.